# ಅಧ್ಯಾಯ-IV
# ಮೋಟಾರು ವಾಹನಗಳ ಮೇಲಿನ ತೆರಿಗೆಗಳು

## 4.1 ತೆರಿಗೆ ನಿರ್ವಹಣೆ

ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957ರ ಅನುವುಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳು ಮೋಟಾರು ವಾಹನಗಳ ಮೇಲಿನ ತೆರಿಗೆಯ ವಿಧಿಸುವಿಕೆ ಹಾಗೂ ವಸೂಲಾತಿ/ಸಂಗ್ರಹಣೆಯನ್ನು ನಿಯಂತ್ರಿಸುತ್ತವೆ. ಮೋಟಾರು ವಾಹನಗಳ ಮೇಲಿನ ತೆರಿಗೆಯ ವಿಧಿಸುವಿಕೆಯನ್ನು ಸಾರಿಗೆಯ ಜಂಟಿ ಆಯುಕ್ತರುಗಳ ಸಹಾಯದಿಂದ ಕಾರ್ಯನಿರ್ವಹಿಸುವ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರವರ ನೇತೃತ್ವದಲ್ಲಿರುವ ಸಾರಿಗೆ ಇಲಾಖೆಯು ನಿಯಂತ್ರಿಸುತ್ತದೆ. ರಾಜ್ಯದಲ್ಲಿ 59 ಪ್ರಾದೇಶಿಕ ಸಾರಿಗೆ ಕಚೇರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳು ಹಾಗೂ 15 ತನಿಖಾ ಠಾಣೆಗಳು ಇವೆ.

## 4.2 ಆಂತರಿಕ ಲೆಕ್ಕಪರಿಶೋಧನೆ

ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಸಾರಿಗೆ ಇಲಾಖೆಯಲ್ಲಿ 1960ರಿಂದಲೂ ಕಾರ್ಯನಿರ್ವಹಿಸುತ್ತಿದೆ. ಇಲಾಖೆಯು ಒದಗಿಸಿದ ಮಾಹಿತಿಯಂತೆ, 2015–16ರಲ್ಲಿ ಲೆಕ್ಕಪರಿಶೋಧನೆ ಕೈಗೊಳ್ಳ ಬೇಕಿದ 84 ಕಚೇರಿಗಳ ಪೈಕಿ, ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಯಾವುದೇ ಕಚೇರಿಯನ್ನೂ ಲೆಕ್ಕಪರಿಶೋಧನೆ ಮಾಡಿರಲಿಲ್ಲ. ಕಚೇರಿಗಳನ್ನು ಲೆಕ್ಕಪರಿಶೋಧನೆಗೆ ವ್ಯಾಪಿಸುವಲ್ಲಿನ ಕೊರತೆಗೆ ವಿಭಾಗದಲ್ಲಿನ ಸಿಬ್ಬಂದಿಯ ಕೊರತೆಯ ಕಾರಣವನ್ನು ನೀಡಲಾಗಿದ್ದಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ, ಇತ್ಯರ್ಥಗೊಂಡಿರುವ ಹಾಗೂ ಬಾಕಿ ಇರುವ ಆಕ್ಷೇಪಣೆಗಳ ಸಂಖ್ಯೆಗಳು ಹಾಗೂ ಅವುಗಳಲ್ಲಿ ಒಳಗೊಂಡಿರುವ ತೆರಿಗೆ ಬಾಧ್ಯತೆಯ ಜೊತೆಯಲ್ಲಿ ವರ್ಷವಾರು ವಿವರಗಳನ್ನು **ಕೋಷ್ಟಕ 4.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.1**
**ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಮಾಡಿದ್ದ ಆಕ್ಷೇಪಣೆಗಳ ವರ್ಷವಾರು ವಿವರಗಳು**

**(₹ ಲಕ್ಷದಲ್ಲಿ)**

| ವರ್ಷ | ಮಾಡಲಾಗಿದ್ದ ಆಕ್ಷೇಪಣೆಗಳು | | ಇತ್ಯರ್ಥಗೊಂಡಿದ್ದ ಆಕ್ಷೇಪಣೆಗಳು | | ಬಾಕಿಯಿದ್ದಂತಹ ಆಕ್ಷೇಪಣೆಗಳು | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 2011-12 | 107 | 53.42 | 27 | 6.50 | 80 | 46.92 |
| 2012-13 | 79 | 116.82 | 16 | 17.63 | 63 | 99.19 |
| 2013-14 | 174 | 513.60 | 36 | 163.12 | 138 | 350.48 |
| 2014-15 | - | - | - | - | | - |
| 2015-16 | - | - | - | - | | - |
| ಒಟ್ಟು | **360** | **683.84** | **79** | **187.25** | **281** | **496.59** |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಇಲಾಖೆಯಲ್ಲಿನ ಆಂತರಿಕ ಲೆಕ್ಕಪರಿಶೋಧನಾ ವಿಭಾಗದ ಕಾರ್ಯಚಟುವಟಿಕೆಗಳು 2013–14ರ ನಂತರ ಬಹಳಷ್ಟುಮಟ್ಟಿಗೆ ಇಳಿಮುಖಗೊಂಡಿದ್ದಿತು ಹಾಗೂ ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ಮೂಲತ: ಶೂನ್ಯವಾಗಿದ್ದಿತು. ಇಲಾಖೆಯು ಆಂತರಿಕ ಲೆಕ್ಕಪರಿಶೋಧನೆಗೆ ಅರ್ಹ ಪ್ರಾಮುಖ್ಯತೆಯನ್ನು ನೀಡುತ್ತಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಅನ್ವಯಗೊಳ್ಳುವ ಅಧಿನಿಯಮ–ನಿಯಮಗಳು, ನಿಯಂತ್ರಣಗಳು ಹಾಗೂ ಅನುಮೋದಿತ ಕಾರ್ಯವಿಧಾನಗಳ ಜೊತೆಯಲ್ಲಿ ಇಲಾಖೆಯು ತೆಗೆದುಕೊಳ್ಳುತ್ತಿರುವ ಅನುಸರಣಾ ಕ್ರಮಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಆಂತರಿಕ ಲೆಕ್ಕಪರಿಶೋಧನೆಯು ಒಂದು ಪ್ರಮುಖ ವ್ಯವಸ್ಥೆಯಾಗಿರುವುದರಿಂದ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಸದೃಢಗೊಳಿಸುವುದಕ್ಕಾಗಿ ಅರ್ಹ ಪ್ರಾಮುಖ್ಯತೆಯನ್ನು ನೀಡಬೇಕೆಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.

## 4.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2015–16ರಲ್ಲಿ ನಡೆಸಲಾದಂತಹ ಸಾರಿಗೆ ಇಲಾಖೆಯ 41 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು, 77 ಕಂಡಿಕೆಗಳ ಮೂಲಕ ಪ್ರಸ್ತುತಪಡಿಸಲಾಗಿರುವಂತೆ, ₹ 5.18 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳು **ಕೋಷ್ಟಕ 4.2**ರಲ್ಲಿ ನೀಡಲಾಗಿರುವ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

**ಕೋಷ್ಟಕ 4.2**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1 | **ಮೋಟಾರು ವಾಹನಗಳ ಇಲಾಖೆಯಲ್ಲಿ 'ಇಲಾಖಾ ಶಾಸನಬದ್ಧ ಕ್ರಮಗಳ ಕಾರ್ಯವೈಖರಿ'** | **1** | **2.57** |
| 2 | ಜೀವಿತಾವಧಿ ತೆರಿಗೆಯನ್ನು ಪಾವತಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದಿದ್ದು | 19 | 0.50 |
| 3 | ತ್ರೈಮಾಸಿಕ ತೆರಿಗೆ ಪಾವತಿಗಾಗಿ ತಗಾದೆಯನ್ನು ವಿಧಿಸಿದಿದ್ದು | 25 | 0.66 |
| 4 | ಇತರೆ ನಿಯಮಬಾಹಿರತೆಗಳು | 32 | 1.45 |
| | **ಒಟ್ಟು** | **77** | **5.18** |

ಪ್ರಸಕ್ತ ಸಾಲಿನಲ್ಲಿ, 74 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದಂತಹ ಪ್ರಕರಣಗಳಲ್ಲಿ ₹ 2.08 ಕೋಟಿ ಮೊತ್ತವು ಒಳಗೊಂಡಂತೆ ಕರನಿರ್ಧಾರಣೆಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷ/ನ್ಯೂನತೆಗಳನ್ನು ಇಲಾಖೆಯು ಒಪ್ಪಿಕೊಂಡಿತು. ಈ ಹಿಂದಿನ ಸಾಲುಗಳಿಗೆ ಸಂಬಂಧಿಸಿದ್ದಂತಹ 47 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದ ಪ್ರಕರಣಗಳಲ್ಲಿ ₹ 1.44 ಕೋಟಿ ಮೊತ್ತವನ್ನೂ ಸಹ ವಸೂಲಾತಿ ಮಾಡಲಾಗಿದ್ದಿತು.

₹ 2.57 ಕೋಟಿ ಮೊತ್ತವು ಒಳಗೊಂಡಂತೆ 'ಮೋಟಾರು ವಾಹನಗಳ ಇಲಾಖೆಯಲ್ಲಿ ಇಲಾಖಾ ಶಾಸನಬದ್ಧ ಕ್ರಮಗಳ ಕಾರ್ಯವೈಖರಿ' ಇದಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯನ್ನು ಈ ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 4.4 ಮೋಟಾರು ವಾಹನಗಳ ಇಲಾಖೆಯಲ್ಲಿ ಇಲಾಖಾ ಶಾಸನಬದ್ಧ ಕ್ರಮಗಳ ಕಾರ್ಯವೈಖರಿ

### ಮುಖ್ಯಾಂಶಗಳು

ದಾಖಲೆಗಳನ್ನು ಸಲ್ಲಿಸದಿದ್ದುದಕ್ಕಾಗಿ ಆರೋಪಗಳನ್ನು ದಾಖಲಿಸಲಾಗಿದ್ದಂತಹ 2,737 ಪ್ರಕರಣಗಳಲ್ಲಿ, 35 ಮೋಟಾರು ವಾಹನಗಳಿಂದ ಬಾಕಿಯಿದ್ದಂತಹ ತೆರಿಗೆ ₹ 1.20 ಕೋಟಿ ಮೊತ್ತವನ್ನು ಗುರುತಿಸಿರಲಿಲ್ಲ ಹಾಗೂ ಪಾವತಿಸುವಂತೆ ತಗಾದೆಯನ್ನು ಸೃಷ್ಟಿಸಿರಲಿಲ್ಲ. 154 ಪ್ರಕರಣಗಳಲ್ಲಿ, ಸುಸ್ಥಿತಿ ಪ್ರಮಾಣಪತ್ರಗಳು, ಅನುಮತಿ ಪ್ರಮಾಣಪತ್ರಗಳು ಹಾಗೂ ಯಾವುದೇ ಆಕ್ಷೇಪಣೆ ಇಲ್ಲದ ಪ್ರಮಾಣಪತ್ರಗಳನ್ನು ದಾಖಲಿಸಲಾಗಿದ್ದಂತಹ ಆರೋಪಗಳ ದಾಖಲೆಗಳನ್ನು ವಿಲೇವಾರಿ ಮಾಡದೆಯೇ ನೀಡಲಾಗಿದ್ದಿತು/ನವೀಕರಿಸಲಾಗಿದ್ದಿತು.

(ಕಂಡಿಕೆಗಳು 4.4.6.2 ಮತ್ತು 4.4.6.3)

13 ಪ್ರಕರಣಗಳಿಗೆ ಸಂಬಂಧಿಸಿದಂತೆ, ನೋಂದಣಿ ಪ್ರಮಾಣಪತ್ರ, ಮೋಟಾರು ವಾಹನ ಚಾಲನಾ ಪರವಾನಿಗೆ, ಪರವಾನಗಿ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮತ್ತೋರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಮೂಲ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಮಾಹಿತಿಯನ್ನು ಖಚಿತಪಡಿಸಿಕೊಳ್ಳದೆಯೇ ಮೂಲಪ್ರತಿಯ ನಕಲು ಪ್ರತಿಯಗಳನ್ನು ನೋಂದಣಿ ಅಧಿಕಾರಿಗಳು ನೀಡಿದ್ದರು.

(ಕಂಡಿಕೆ 4.4.6.2)

ವಾಹನಗಳಲ್ಲಿ ಮಿತಿಮೀರಿದ ಹೊರೆಯನ್ನು ಹಾಕಿದ್ದ ಕಾರಣ 438 ಪ್ರಕರಣಗಳಲ್ಲಿ ದಾಖಲಿಸಲಾಗಿದ್ದ ಆರೋಪಗಳಿಗೆ ಸಂಬಂಧಿಸಿದಂತೆ, ಮಿತಿಮೀರಿದ ಹೊರೆಯನ್ನು ವಾಹನಗಳಿಂದ ಹೊರಕ್ಕೆ ಇಳಿಸಿರಲಿಲ್ಲ ಹಾಗೂ ₹ 68.19 ಲಕ್ಷ ಮೊತ್ತದಷ್ಟು ಸಂಯೋಜನಾ ದಂಡವನ್ನೂ ವಸೂಲಾತಿ ಮಾಡಿರಲಿಲ್ಲ.

(ಕಂಡಿಕೆಗಳು 4.4.7.1 ಮತ್ತು 4.4.7.2)

ಕ್ಷೇತ್ರ ಕಚೇರಿಗಳು ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರದ ನಡುವೆ ಸಮನ್ವಯತೆಯ ಕೊರತೆಯು, ಪರವಾನಿಗೆಗಳನ್ನು ಅಮಾನತ್ತಿನಲ್ಲಿಡಲಾಗಿದ್ದಂತಹ 143 ವಾಹನಗಳಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳೂ ಇರದ ಪ್ರಮಾಣಪತ್ರಗಳನ್ನು ನೀಡುವಲ್ಲಿ ಹಾಗೂ ದಾಖಲೆಗಳನ್ನು ವಶಕ್ಕೆ ತೆಗೆದುಕೊಳ್ಳದೇ ಇರುವುದಲ್ಲಿ ಪರಿಣಮಿಸಿದ್ದಿತು.

(ಕಂಡಿಕೆ 4.4.8)

₹ 63.08 ಲಕ್ಷ ಮೊತ್ತದಷ್ಟು ತೆರಿಗೆಯನ್ನು ಪಾವತಿಸದಿದ್ದುದಕ್ಕಾಗಿ ವಶಪಡಿಸಿಕೊಳ್ಳಲಾಗಿದ್ದ 130 ವಾಹನಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡದಿದ್ದುದು, ಈ ವಾಹನಗಳಿಂದ ಬಾಕಿಯಿದ್ದಂತಹ ತೆರಿಗೆಯನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿದ್ದಿತು.

(ಕಂಡಿಕೆ 4.4.9.1)

### 4.4.1 ಪೀಠಿಕೆ

ಮೋಟಾರು ವಾಹನಗಳ ಮೇಲೆ ತೆರಿಗೆಯನ್ನು ವಿಧಿಸುವಿಕೆ ಹಾಗೂ ನಿಯಂತ್ರಣವು ಅನೇಕ ಸಂಖ್ಯೆಯ ಕಾಯಿದೆ/ನಿಬಂಧನೆಗಳ ಮೂಲಕ ನಿರ್ವಹಿಸಲ್ಪಡುತ್ತದೆ. ಈ ಯಾವುದೇ ಕಾಯಿದೆ/ನಿಬಂಧನೆಗಳ ಅಡಿಯಲ್ಲಿನ ನಿಯಮಗಳ ಉಲ್ಲಂಘನೆಯು, ಉದಾಹರಣೆಗೆ, ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ಪಾವತಿಸದಿರುವುದು, ಒಂದು ಊರ್ಜಿತವಾದಂತಹ ಪರವಾನಿಗೆಯಿಲ್ಲದೆಯೇ ಅಥವಾ ಊರ್ಜಿತವಾದಂತಹ ದೈಹಿಕ ದೃಢತೆಯ ಪ್ರಮಾಣಪತ್ರವನ್ನು ಹೊಂದಿರದೆಯೇ ಸಾರ್ವಜನಿಕ ರಸ್ತೆಯಲ್ಲಿ ವಾಹನಗಳನ್ನು ಚಲಿಸುವುದು, ಪರವಾನಿಗೆ ಇಲ್ಲದೆಯೇ ಚಾಲನೆ ಮಾಡುವುದು, ಮಿತಿಮೀರಿದ ಭಾರವನ್ನು ಹಾಕುವುದು, ನೋಂದಣಿಯ ಪ್ರಮಾಣಪತ್ರವನ್ನು ಹೊಂದಿರದಿರುವುದು, ನೋಂದಣಿಯನ್ನು ಮಾಡಿಸದೆಯೇ/ವಿಮಾ ಪ್ರಮಾಣಪತ್ರವನ್ನು ಹೊಂದಿರದೆಯೇ/ವಾಯುಮಾಲಿನ್ಯ ನಿಯಂತ್ರಣದಲ್ಲಿರುವ ಪ್ರಮಾಣಪತ್ರ ಅಥವಾ ಹೊಗೆ ಉಗುಳುವಿಕೆಗೆ ಸಂಬಂಧಿತ ಪರೀಕ್ಷಾ ಪ್ರಮಾಣಪತ್ರ, ಇತ್ಯಾದಿಗಳನ್ನು ಹೊಂದಿರದೆಯೇ ರಸ್ತೆಯಲ್ಲಿ ಚಲಿಸುವುದು, ಇತ್ಯಾದಿಗಳನ್ನು ಸಾರಿಗೆ ಇಲಾಖೆಯ ಅಧಿಕಾರಿಗಳು ಪತ್ತೆಹಚ್ಚಿದ ವೇಳೆಯಲ್ಲಿ ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ಆರೋಪಗಳನ್ನು ದಾಖಲಿಸುವರು.

ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ದಾಖಲಿಸಲಾದಂತಹ ಆರೋಪಗಳನ್ನು, ಆರೋಪಗಳನ್ನು ದಾಖಲಿಸುವ ಸಮಯದಲ್ಲಿ ಅನುಮತಿ ನೀಡಲಾಗಿರುವ ಅಧಿಕೃತ ಅಧಿಕಾರಿಗಳು ಸಂಯೋಜಿಸಬಹುದು. ನೋಂದಾಯಿತ ಮಾಲೀಕರುಗಳು/ಚಾಲಕರುಗಳು ಸಂಯೋಜನಾ ದಂಡದ ಮೊತ್ತವನ್ನು ಪಾವತಿಸಲು ನಿರಾಕರಿಸಿದ್ದು, ಪ್ರಕರಣವು 15 ದಿನಗಳ ನಿರ್ದಿಷ್ಟ ಸಮಯದ ಒಳಗೆ ಇತ್ಯರ್ಥಗೊಳ್ಳದಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮವನ್ನು ಜರುಗಿಸುವ ಸಲುವಾಗಿ ಇಲಾಖೆಯು ನ್ಯಾಯಾಲಯದ ಮುಂದೆ ಒಂದು ಅಪರಾಧ ಪ್ರಕರಣವನ್ನು ಸಲ್ಲಿಸಬೇಕು.

ಬಾಕಿಯಿರುವಂತಹ ತೆರಿಗೆಯನ್ನು ಯಾವುದೇ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಸಮಯದ ಒಳಗೆ (ತ್ರೈಮಾಸಿಕ, ಅರ್ಧ ವಾರ್ಷಿಕ, ವಾರ್ಷಿಕ ಅಥವಾ ಜೀವಿತಾವಧಿ ತೆರಿಗೆ, ಇವುಗಳಲ್ಲಿ ಯಾವುದೇ ಆಗಿರಬಹುದು) ಪಾವತಿಸದಿದ್ದಲ್ಲಿ, ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ರವರ ಶ್ರೇಣಿಗೆ ಕಡಿಮೆ ಇಲ್ಲದ ಇಲಾಖೆಯ ಅಧಿಕೃತ ಅನುಮತಿಸಲಾಗಿರುವ ಅಧಿಕಾರಿಯವರು ತೆರಿಗೆ ವಸೂಲಾತಿಗಾಗಿ ಮೋಟಾರು ವಾಹನವನ್ನು ಸ್ವಾಧೀನಪಡಿಸಿಕೊಳ್ಳಬಹುದು ಹಾಗೂ ತಡೆಹಿಡಿದಿಟ್ಟುಕೊಳ್ಳಬಹುದು.

### 4.4.2 ಲೆಕ್ಕಪರಿಶೋಧನೆಯ ಉದ್ದೇಶಗಳು

ಲೆಕ್ಕಪರಿಶೋಧನೆಯು ಈ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿತು:

- ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ನೋಂದಾಯಿತಗೊಂಡಿರುವ ಪ್ರಕರಣಗಳನ್ನು ಪ್ರಸ್ತುತ ಇರುವಂತಹ ನಿಯಂತ್ರಕ ಚೌಕಟ್ಟಿನ ಅನುಸರಣೆಯಂತೆ ವಿಲೇವಾರಿ ಮಾಡಲಾಗಿದ್ದಿತೆ? ಹಾಗೂ
- ಪರಿಣಾಮಕಾರಿತ್ವದಿಂದ ಕೂಡಿದ ಅನುಸರಣಾ ಕ್ರಮಗಳಿಗಾಗಿ, ಇಲಾಖೆಯ ಜಾರಿ ಕಾರ್ಯಚಟುವಟಿಕೆಗಳನ್ನು ವಾಹನ (VAHAN) ತಂತ್ರಾಂಶ ಅನ್ವಯದ ಜೊತೆ ಸೂಕ್ತವಾಗಿ ಸಂಪರ್ಕಿಸಲಾಗಿದ್ದಿತೆ?

### 4.4.3 ಲೆಕ್ಕಪರಿಶೋಧನೆಯ ಮಾನದಂಡಗಳು

ಲೆಕ್ಕಪರಿಶೋಧನೆಯ ಮಾನದಂಡಗಳ ಮೂಲಗಳು ಈ ಕೆಳಗಿನಂತಿದ್ದವು:

- ಮೋಟಾರು ವಾಹನಗಳ ಅಧಿನಿಯಮ, 1988
- ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989
- ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989
- ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957
- ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1957
- ಈ ನಿಟ್ಟಿನಲ್ಲಿ ಸಾರಿಗೆ ಮತ್ತು ರಸ್ತೆ ಸುರಕ್ಷತೆಗಾಗಿನ ಆಯುಕ್ತರವರು ನೀಡಿರುವಂತಹ ಸುತ್ತೋಲೆಗಳು

### 4.4.4 ಲೆಕ್ಕಪರಿಶೋಧನೆಯ ವ್ಯಾಪ್ತಿ

ಲೆಕ್ಕಪರಿಶೋಧನೆಯ ಅವಧಿಯು 2011–12ರಿಂದ 2015–16ರವರೆಗಿನ ಐದು ವರ್ಷಗಳಿಗೆ ಆಗಿದ್ದಿತು. ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡುವಲ್ಲಿನ ಹಾಗೂ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿಗಳ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿರುವ ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿರುವ ಮೋಟಾರು ವಾಹನಗಳನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ವ್ಯವಸ್ಥೆಗಳು ಮತ್ತು ನಿಯಂತ್ರಣಗಳ ಸಮರ್ಪಕತೆಯನ್ನು ಈ ಲೆಕ್ಕಪರಿಶೋಧನೆಯಲ್ಲಿ ವಿಶ್ಲೇಷಿಸಲಾಯಿತು. ಸಾರಿಗೆಗಾಗಿನ 59

ಉಪ ಆಯುಕ್ತರುಗಳ ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳನ್ನು/ಪ್ರಾದೇಶಿಕ ಸಾರಿಗೆ ಕಚೇರಿಗಳ ಪೈಕಿ 12[1]ನ್ನು ಹಾಗೂ 15 ತನಿಖಾ ಠಾಣೆಗಳ ಪೈಕಿ ಮೂರನ್ನು[2] ಭೌಗೋಳಿಕ ಪ್ರಾತಿನಿಧ್ಯದ[3] ಆಧಾರದ ಮೇರೆಗೆ ದಾಖಲೆಗಳ ಪರೀಕ್ಷಾ–ಪರಿಶೀಲನೆಗಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ರಾಜ್ಯದೆಲ್ಲೆಡೆ, 31 ಮಾರ್ಚ್ 2016ರಲ್ಲಿದ್ದಂತೆ ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ಬಾಕಿಯಿದ್ದಂತಹ ಪ್ರಕರಣಗಳ ಒಟ್ಟಾರೆ ಸಂಖ್ಯೆಯು 1,02,014 ಆಗಿದ್ದಿತು. ಇದರ ಪೈಕಿ, 39,399 ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳು ಆಯ್ಕೆ ಮಾಡಿಕೊಳ್ಳಲಾಗಿದ್ದ ಕಚೇರಿಗಳಲ್ಲಿದ್ದವು, ಅವುಗಳ ಪೈಕಿ 3,750 ಪ್ರಕರಣಗಳನ್ನು ಯಾದೃಚ್ಛಿಕ ಆಯ್ಕೆ ಪದ್ಧತಿಯ ಆಧಾರದ ಮೇರೆಗೆ ಲೆಕ್ಕಪರಿಶೋಧನೆಗಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ತೆರಿಗೆ ಬಾಕಿಗಳ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿರುವ ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿರುವ ವಾಹನಗಳಿಗೆ ಸಂಬಂಧಿಸಿದಂತೆ, ಶೇಕಡಾ 100ರಷ್ಟು ಪ್ರಕರಣಗಳ ಪರೀಕ್ಷೆ ನಡೆಸಲಾಯಿತು. ಆಯ್ಕೆ ಮಾಡಿಕೊಳ್ಳಲಾಗಿದ್ದ ಕಚೇರಿಗಳಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ ವಾಹನಗಳ ಸಂಖ್ಯೆಯು 400 ಆಗಿದ್ದಿತು.

## 4.4.5 ವಿಧಾನ

ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳ ಬಾಕಿಗಳು ಹಾಗೂ ವಿಲೇವಾರಿಗಳ ದಾಖಲೆಗಳನ್ನು ಹಾಗೂ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿದ್ದ ವಾಹನಗಳ ಮಾರಾಟ ಮತ್ತು ಬಾಕಿ ಇರುವವುಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಬರಬೇಕಾದ ಬಾಕಿಗಳ ವಸೂಲಾತಿಗಾಗಿ ಹಾಗೂ ಸಂಯೋಜನಾ ದಂಡದ ಮೊತ್ತವನ್ನು ವಸೂಲಾತಿ ಮಾಡುವುದಕ್ಕಾಗಿ ಹಾಗೂ ಮೂಲ ನೋಂದಣಿ ಅಧಿಕಾರಿಯವರಿಗೆ/ಪರವಾನಿಗೆಯನ್ನು ನೀಡುವ ಅಧಿಕಾರಿಯವರಿಗೆ ಬಾಕಿ ಇರುವ ಪ್ರಕರಣಗಳ ಬಗ್ಗೆ ಸಮಯೋಚಿತ ಮಾಹಿತಿಯನ್ನು ನೀಡುವುದರೊಂದಿಗೆ ಸಮಯೋಚಿತ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವ ಸಲುವಾಗಿ ಪರೀಕ್ಷಾ–ಪರಿಶೀಲನೆ ಮಾಡಲಾಯಿತು. ಹಾಗೂ ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳನ್ನು ವಿಲೇವಾರಿ ಮಾಡದೆಯೇ ದೈಹಿಕ ದೃಢತೆ ಪ್ರಮಾಣಪತ್ರಗಳು, ಅನುಮತಿ ಪ್ರಮಾಣಪತ್ರಗಳು/ಯಾವುದೇ ಆಕ್ಷೇಪಣೆಗಳಿಲ್ಲದ ಪ್ರಮಾಣಪತ್ರಗಳನ್ನು ನೀಡಿರುವುದು / ನವೀಕರಿಸಿರುವುದು ಹಾಗೂ, ತೆರಿಗೆಯ ನಿಯತವಾದ ಪಾವತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ರಾಜ್ಯ ರಿಜಿಸ್ಟರ್‌ಗೆ[4], ರಾಷ್ಟ್ರೀಯ ರಿಜಿಸ್ಟರ್‌ಗೆ[5] (ಅಂದರೆ ವಾಹನ (VAHAN)) ಹಾಗೂ ಮೂಲ ನೋಂದಣಿ ಅಧಿಕಾರಿಯವರ ದಾಖಲೆಗಳ ಜೊತೆಯಲ್ಲಿ ಅಡ್ಡಪರಿಶೀಲನೆಗಳನ್ನು ಮಾಡಲಾಯಿತು.

## 4.4.6 ಇಲಾಖೆಯಲ್ಲಿನ ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳ ದಾಖಲಾತಿ ಹಾಗೂ ಅವುಗಳ ಸ್ಥಿತಿಗತಿ

ಮಾಡಲಾಗಿರುವ ಉಲ್ಲಂಘನೆ/ಅಪರಾಧಗಳನ್ನು ಅಧಿನಿಯಮ ಮತ್ತು ನಿಯಮಗಳ ಸಂಬಂಧಿತ ಅನುವುಗಳ ಅಡಿಯಲ್ಲಿ ದಾಖಲಿಸಲಾಗುವುದು. ಈ ಮೊದಲು ತಿಳಿಸಿದಂತೆ, ಅಂತಹ ಪ್ರಕರಣಗಳನ್ನು ಸಂಯೋಜನಾ ದಂಡದ ಮೊತ್ತವನ್ನು ವಸೂಲಾತಿ ಮಾಡುವ ಮೂಲಕ ಅಥವಾ ಕಾನೂನು ಕ್ರಮಗಳನ್ನು ಕೈಗೊಳ್ಳುವ ಮೂಲಕ ಇತ್ಯರ್ಥಗೊಳಿಸಲಾಗುವುದು. ಸಂಯೋಜನಾ ದಂಡದ ಮೊತ್ತವನ್ನು ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ರವರ

---

[1] ಉಆ, ಸಾಇ ಹಾಗೂ ಹಿರಿಯ ಪ್ರಾಸಾಅಗಳು, ಬೆಂಗಳೂರು (ದಕ್ಷಿಣ), ಉಆ, ಸಾಇ ಹಾಗೂ ಹಿರಿಯ ಪ್ರಾಸಾಅ, ಬೆಂಗಳೂರು (ಕೇಂದ್ರ), ಉಆ, ಸಾಇ ಹಾಗೂ ಹಿರಿಯ ಪ್ರಾಸಾಅ, ಇಲೆಕ್ಟ್ರಾನಿಕ್ ಸಿಟಿ, ಬೆಂಗಳೂರು; ಉಆ, ಸಾಇ ಹಾಗೂ ಹಿರಿಯ ಪ್ರಾಸಾಅ, ಮಂಗಳೂರು, ಉಆ, ಸಾಇ ಹಾಗೂ ಹಿರಿಯ ಪ್ರಾಸಾಅ, ಕಲಬುರಗಿ; ಉಆ, ಸಾಇ ಹಾಗೂ ಹಿರಿಯ ಪ್ರಾಸಾಅ, ಧಾರವಾಡ; ಉಆ, ಸಾಇ ಹಾಗೂ ಹಿರಿಯ ಪ್ರಾಸಾಅ, ಶಿವಮೊಗ್ಗ; ಪ್ರಾಸಾಅ, ಹಾಸನ; ಪ್ರಾಸಾಅ, ನೆಲಮಂಗಲ; ಪ್ರಾಸಾಅ, ಕೋಲಾರ; ಪ್ರಾಸಾಅ, ಮಂಡ್ಯ; ಸಾರಿಗೆಗಾಗಿ ಹೆಚ್ಚುವರಿ ಆಯುಕ್ತರು ಮತ್ತು ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು.

[2] ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಹುಮ್ನಾಬಾದ್ ತನಿಖಾ ಠಾಣೆ, ಬೀದರ, ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಝುಲ್ಕಿ ತನಿಖಾ ಠಾಣೆ, ವಿಜಯಾಪುರ ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಅತ್ತಿಬೇಲೆ ತನಿಖಾ ಠಾಣೆ, ಬೆಂಗಳೂರು.

[3] ರಾಜ್ಯದಲ್ಲಿನ ವಾಯವ್ಯ ವಲಯ ಹಾಗೂ ಈಶಾನ್ಯ ವಲಯಗಳಲ್ಲಿ ಪ್ರತಿಯೊಂದರಲ್ಲೂ ಎರಡು ಕಚೇರಿಗಳು, ಹಾಗೂ ಪೂರ್ವ, ಪಶ್ಚಿಮ ಹಾಗೂ ಕೇಂದ್ರ ವಲಯಗಳಲ್ಲಿ ಪ್ರತಿಯೊಂದರಲ್ಲೂ ಒಂದು ಕಚೇರಿ. ಮುಂದುವರೆದು, ದಕ್ಷಿಣ ವಲಯದಲ್ಲಿ ಬೆಂಗಳೂರು ನಗರ ಹಾಗೂ ಗ್ರಾಮೀಣ ವಿಭಾಗಗಳು ಬರುವುದರಿಂದ ಹಾಗೂ ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾಕಿಗಳು ಇದ್ದವಾದ್ದರಿಂದ ಎಂಟು ಕಚೇರಿಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

[4] ರಾಜ್ಯ ಮಟ್ಟದಲ್ಲಿ ಲಭ್ಯವಿರುವ ಮಾಹಿತಿಯ ಮಟ್ಟದಲ್ಲಿ ಹೊಸ ಸೇವೆಗಳನ್ನು ಪ್ರಾರಂಭಿಸುವುದನ್ನು ಯಾವುದೇ ಅವಲಂಬನೆಯನ್ನು ತಪ್ಪಿಸುವುದಕ್ಕಾಗಿ ಪ್ರಾಸಾಕಯ ಮಟ್ಟದಲ್ಲಿ ಸೆರೆಹಿಡಿಯಲಾಗುವ ನೋಂದಣಿ ವಿವರಗಳು, ತೆರಿಗೆ ಪಾವತಿ, ವಾಹನಗಳ ವರ್ಗ, ವಿಳಾಸ ಇತ್ಯಾದಿ ಮಾಹಿತಿಯು ಸಂಪೂರ್ಣವಾಗಿ ರಾಜ್ಯ ರಿಜಿಸ್ಟರ್‌ಗೆ ಹೋಗುತ್ತದೆ.

[5] ರಾಜ್ಯ ಮಾಹಿತಿ ಕೇಂದ್ರಗಳಲ್ಲಿ ಇರುವಂತಹ ವಿವಿಧ ರಾಜ್ಯ ರಿಜಿಸ್ಟರ್‌ಗಳಿಂದ ಮಾಹಿಯು, ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ನಿರ್ವಹಿಸಿರುವ ರಾಷ್ಟ್ರೀಯ ರಿಜಿಸ್ಟರ್‌ಗೆ ಹರಿಯುತ್ತದೆ. ರಾಷ್ಟ್ರೀಯ ರಿಜಿಸ್ಟರ್ ಎಲ್ಲಾ ಪ್ರಮುಖ ದತ್ತ/ಮಾಹಿತಿಯ ಒಂದು ಕೇಂದ್ರ ಭಂಡಾರವಾಗಿ ಪಾತ್ರವಹಿಸುತ್ತದೆ. ಇದು, "ಎಲ್ಲಿಯೇ ಆದರೂ ಸೇವೆ" ಅಡಿಯಲ್ಲಿ ಸೇವೆಯನ್ನು ಬಳಸಿಕೊಳ್ಳಲು ಬಳಕೆದಾರರಿಗೆ ಅನುಕೂಲ ಕಲ್ಪಿಸುತ್ತದೆ.

ಶ್ರೇಣಿಗೆ ಕಡಿಮೆ ಇಲ್ಲದ ಜಾರಿ ಅಧಿಕಾರಿಯವರು ಸ್ಥಳದಲ್ಲಿಯೇ ಪರೀಕ್ಷಣಾ ವರದಿ ಸಹಿತ ರಸೀದಿ (CRR)[6] ಅಥವಾ ಪರೀಕ್ಷಣಾ ವರದಿಯ ಮೂಲಕ ವಿಧಿಸುವರು (CR)[7]. ಕರ್ನಾಟಕ ಸರ್ಕಾರವು ಸಾರಿಗೆ ಇಲಾಖೆಯ ಗಣಕೀಕರಣವನ್ನು 2000–01ರ ಅವಧಿಯಿಂದಲೇ ಪ್ರಾರಂಭಿಸಿತಾದರೂ, ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳನ್ನು ಇನ್ನೂ ಗಣಕೀಕರಣಗೊಳಿಸಿರುವುದಿಲ್ಲ. ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ರವರು ವಾಹನಗಳನ್ನು ಪರೀಕ್ಷಿಸುವ ವೇಳೆಯಲ್ಲಿ ದಾಖಲಿಸಲಾದ ಪ್ರಕರಣಗಳನ್ನು ಕಚೇರಿಗೆ ಕಳುಹಿಸಲಾಗುವುದು, ಅಲ್ಲಿ ಅವುಗಳನ್ನು ಇಲಾಖಾ ಶಾಸನಬದ್ಧ ಕ್ರಮಗಳ ವಹಿಯಲ್ಲಿ ಕೈಯಿಂದ ದಾಖಲಿಸಲಾಗುವುದು ಹಾಗೂ ಈ ಪ್ರಕರಣಗಳ ಅನುಸರಣಾ ಕ್ರಮಗಳನ್ನು ಗಮನಿಸಲಾಗುವುದು. ಒಂದು ಪ್ರಕರಣವು ಇತ್ಯರ್ಥಗೊಂಡಾಗ, ವಹಿಯಲ್ಲಿ ಅದನ್ನು ದುಂಡುಗೆರೆಯನ್ನು ಎಳೆಯುವ ಮೂಲಕ ರದ್ದುಗೊಳಿಸಲಾಗುವುದು.

ಲೆಕ್ಕಪರಿಶೋಧನೆಯ ವಿಧಾನದ ಅಡಿಯಲ್ಲಿ ತಿಳಿಸಿರುವಂತೆ, ಲೆಕ್ಕಪರಿಶೋಧನೆಯು ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ಕಚೇರಿಗಳು ಹಾಗೂ ತನಿಖಾ ಠಾಣೆಗಳಲ್ಲಿ 2011–12ರಿಂದ 2015–16ರ ಅವಧಿಯಲ್ಲಿ ದಾಖಲಿಸಲಾದಂತಹ ಪ್ರಕರಣಗಳ ವಿಶ್ಲೇಷಣೆಗಾಗಿ ಒಂದು ಮಾದರಿ ಆಯ್ಕೆಯನ್ನು ಮಾಡಿಕೊಂಡಿತು. ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳ ಮಾದರಿ ಆಯ್ಕೆಗಳು **ಕೋಷ್ಟಕ 4.3**ರಲ್ಲಿ ನೀಡಲಾಗಿರುವ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ 4.3**

ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿ ಬಾಕಿಯಿರುವಂತಹ ಪ್ರಕರಣಗಳ ಸ್ಥಿತಿಗತಿ

| ಉಲ್ಲಂಘನೆ/ಅಪರಾಧಗಳ ಸ್ವರೂಪ | ಪ್ರಕರಣಗಳ ಸಂಖ್ಯೆ |
|---|---|
| ದಾಖಲೆಗಳನ್ನು ಒದಗಿಸದಿದ್ದುದು/ನೀಡದಿದ್ದುದು | 2,737 |
| ಮೋಟಾರು ವಾಹನಗಳು ಸರಕುಗಳನ್ನು ಮಿತಿಮೀರಿದಂತೆ ತುಂಬಿಕೊಂಡಿದ್ದುದು | 438 |
| ತೆರಿಗೆಯನ್ನು ಪಾವತಿಸದಿದ್ದುದಕ್ಕಾಗಿ ಮೋಟಾರುವಾಹನಗಳನ್ನು/ಸ್ವಾಧೀನಪಡಿಸಿಕೊಂಡಿದ್ದುದು. | 400 |
| ಪರವಾನಿಗೆ ಷರತ್ತುಗಳ ಉಲ್ಲಂಘನೆ | 163 |
| ಮೋಟಾರು ವಾಹನಗಳ ದುರ್ಬಳಕೆ/ಮಾರ್ಪಾಟು ಮಾಡಿದ್ದುದು | 12 |
| ಒಟ್ಟು | 3,750 |

ಈ ಪ್ರಕರಣಗಳನ್ನು ವಿಲೇವಾರಿ ಮಾಡುವ ಸಲುವಾಗಿ ತೆಗೆದುಕೊಳ್ಳಲಾದಂತಹ ಅನುಸರಣಾ ಪ್ರಯತ್ನಗಳನ್ನು ದಾಖಲಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಂಬಂಧಿತ ಮೋಟಾರು ವಾಹನಗಳು ಯಾವುದೇ ಆಕ್ಷೇಪಣೆಗಳು ಇಲ್ಲದಿರುವ ಬಗ್ಗೆ ಪ್ರಮಾಣಪತ್ರಗಳು, ಅನುಮತಿ ಪತ್ರ, ದೈಹಿಕ ಸ್ಥಿರತೆ ಪ್ರಮಾಣಪತ್ರ, ಇತ್ಯಾದಿ ವಿವಿಧ ವ್ಯವಹಾರಗಳಿಗಾಗಿ ಪ್ರಾದೇಶಿಕ ಸಾರಿಗೆ ಇಲಾಖೆಯನ್ನು ಸಂಪರ್ಕಿಸಿದಾಗಲೂ ಸಹ ಇಲಾಖೆಯು ಈ ಪ್ರಕರಣಗಳನ್ನು ಸಂಯೋಜನಾ ದಂಡದ ಮೊತ್ತಕ್ಕೆ ಪ್ರತಿಯಾಗಿ ಇತ್ಯರ್ಥಗೊಳಿಸಲಿಲ್ಲ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಮಾಡಿದ ವಿಶ್ಲೇಷಣೆಯನ್ನು ಈ ಕೆಳಗಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ:

### 4.4.6.1 ಪರೀಕ್ಷಣೆಗಳ ವೇಳೆಯಲ್ಲಿ ಸಂಪೂರ್ಣ ವಿವರಗಳನ್ನು ಪರಿಶೀಲಿಸುವಲ್ಲಿನ ವಿಫಲತೆ ಹಾಗೂ ಬಾಕಿಯಿರುವಂತಹ ಪ್ರಕರಣಗಳ ಬಗ್ಗೆ ಅಸಮರ್ಪಕ ಅನುಸರಣಾ ಕ್ರಮಗಳು

ಅಧಿನಿಯಮದ ಅನುವುಗಳನ್ನು ಅಥವಾ ಅಂತಹ ಪರವಾನಿಗೆಯ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಂತೆ ಮೋಟಾರು ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದಾಗಿ ನಂಬಲು ಕಾರಣಗಳಿದ್ದಲ್ಲಿ ಅಂತಹ ವಾಹನವನ್ನು ನಿರ್ದಿಷ್ಟ ರೀತಿಯಲ್ಲಿ ಸ್ವಾಧೀನಪಡಿಸಿಕೊಳ್ಳಲು/ತಡೆಹಿಡಿದಿಟ್ಟುಕೊಳ್ಳಲು ಅಧಿಕೃತ ಅಧಿಕಾರಿಗಳಿಗೆ ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 207ರ ಅಡಿಯಲ್ಲಿ ಅಧಿಕಾರ ನೀಡಿದೆ.

ಮೋಟಾರು ವಾಹನಗಳ ಅಧಿನಿಯಮದ ಹಾಗೂ ಅದರ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳ ಅನುವುಗಳನ್ನು ಅನುಸರಿಸಲಾಗುತ್ತಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಅದಕ್ಕೆ ಉಚಿತವೆನಿಸಿದ ರೀತಿಯಲ್ಲಿ ಪರೀಕ್ಷಣೆಯನ್ನು ಹಾಗೂ ತನಿಖೆಯನ್ನು ಕೈಗೊಳ್ಳಲು, ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 213 ಇಲಾಖೆಗೆ ಅಧಿಕಾರವನ್ನು ನೀಡಿದೆ. ಯಾವುದೇ ವ್ಯಕ್ತಿಯನ್ನು ಪರೀಕ್ಷಿಸಲು ಹಾಗೂ ಅವರು ಅಧಿನಿಯಮದ ಅನುಸರಣೆಯಂತೆ ನಿರ್ವಹಿಸಲಾಗಿರುವ ಯಾವುದೇ ವಹಿ ಅಥವಾ ಇತರೆ ದಾಖಲೆಗಳನ್ನು ಒದಗಿಸುವಂತೆ ಮಾಡಲು ಹಾಗೂ ಅಧಿನಿಯಮದ ಉದ್ದೇಶಗಳನ್ನು ನಡೆಸಿಕೊಂಡು ಹೋಗುವಲ್ಲಿ ಅಗತ್ಯವಿರುವುದಾಗಿ ಪರಿಗಣಿಸಲಾದಲ್ಲಿ, ಯಾವುದೇ ವ್ಯಕ್ತಿಯಿಂದ ಸ್ಥಳದಲ್ಲಿಯೇ ಅಥವಾ ಇನ್ನಿತರ ಸ್ಥಳಗಳಲ್ಲಿ ಹೇಳಿಕೆಗಳನ್ನು ಪಡೆದುಕೊಳ್ಳಲೂ ಸಹ ಅದು ಇಲಾಖೆಗೆ ಅಧಿಕಾರವನ್ನು ನೀಡಿದೆ.

---

6 ಅಪರಾಧಗಳನ್ನು ಸ್ಥಳದಲ್ಲಿಯೇ ದಂಡ ಪಾವತಿಸುವ ಮೂಲಕ ಸಂಯೋಜನೆಗೊಳಿಸಿಕೊಂಡಲ್ಲಿ, ಪರೀಕ್ಷಣಾ ವರದಿ ಸಹಿತ ರಸೀದಿಯನ್ನು (ಸಿಆರ್‌ಆರ್) ನೀಡಲಾಗುವುದು.

7 ಪರೀಕ್ಷಣಾ ವರದಿಯು, ಅಪರಾಧಗಳನ್ನು ಸ್ಥಳದಲ್ಲಿಯೇ ದಂಡ ಪಾವತಿಸುವ ಮೂಲಕ ಸಂಯೋಜನೆಗೊಳಿಸಿಕೊಳ್ಳದಿದ್ದಲ್ಲಿ ಕಾರಣವನ್ನು ಕೇಳಿ ತದನಂತರದ ದಿನಾಂಕದಲ್ಲಿ ನೀಡಲಾಗುವ ಒಂದು ನೋಟೀಸು ಆಗಿರುತ್ತದೆ.

ಮುಂದುವರೆದು, ಮೋಟಾರು ವಾಹನಗಳ ಅಧಿನಿಯಮ, 1988ರ ಪರಿಚ್ಛೇದ 130ರ ಜೊತೆಯಲ್ಲಿ ಓದಲ್ಪಡುವ ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 139ರ ಅನುಸಾರ, ಒಂದು ಮೋಟಾರು ವಾಹನದ ಚಾಲಕರು ಅಥವಾ ನಿರ್ವಾಹಕರು, ಸಮವಸ್ತ್ರದಲ್ಲಿರುವ ಯಾವುದೇ ಪೋಲೀಸ್ ಅಧಿಕಾರಿಯವರು ಅಥವಾ ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಅನುಮತಿ ನೀಡಿರುವಂತಹ ಇತರೆ ಯಾವುದೇ ಅಧಿಕಾರಿಯವರು ಸಲ್ಲಿಸುವಂತೆ ಒತ್ತಾಯಿಸಿದಲ್ಲಿ, ನೋಂದಣಿ ಪ್ರಮಾಣಪತ್ರ, ಪರೀಕ್ಷಣಾ ಪ್ರಮಾಣಪತ್ರ (ಐಸಿ), ದೈಹಿಕ ದೃಢತೆಯ ಪ್ರಮಾಣಪತ್ರ, ಪರವಾನಿಗೆ, ಮೋಟಾರು ಚಾಲನೆಯ ಪರವಾನಿಗೆ ಹಾಗೂ ಇನ್ನಿತರೆ ಸಂಬಂಧಿತ ದಾಖಲೆಗಳನ್ನು ಸಲ್ಲಿಸತಕ್ಕದ್ದು, ಹಾಗೂ ಮೇಲಿನವುಗಳಲ್ಲಿ ಯಾವುದಾದರೂ ಒಂದನ್ನು ಅಥವಾ ಮೇಲಿನ ಎಲ್ಲಾ ದಾಖಲೆಗಳು ಆ ವ್ಯಕ್ತಿಯ ವಶದಲ್ಲಿ ಇರದಿದ್ದಲ್ಲಿ, ಆ ವ್ಯಕ್ತಿಯು ಅಂತಹ ದಾಖಲೆಯ ದೃಢೀಕರಿಸಲ್ಪಟ್ಟ ಪ್ರತಿಯನ್ನು ಸಲ್ಲಿಸುವಂತೆ ಒತ್ತಾಯಿಸಿದ ದಿನಾಂಕದಿಂದ 15 ದಿನಗಳ ಒಳಗೆ ಸಲ್ಲಿಸತಕ್ಕದ್ದು.

**4.4.6.2** ಆಯ್ಕೆ ಮಾಡಲಾದ ಮಾದರಿಗಳಿಂದ, ದಾಖಲೆಗಳನ್ನು ಒದಗಿಸದಿದ್ದುದಕ್ಕಾಗಿ 2,737 ಪ್ರಕರಣಗಳನ್ನು ದಾಖಲಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಅವುಗಳಲ್ಲಿ ಚಾಲಕರುಗಳು ನೋಂದಣಿ ಪ್ರಮಾಣಪತ್ರ, ದೈಹಿಕ ದೃಢತೆಯ ಪ್ರಮಾಣಪತ್ರ, ಪರೀಕ್ಷಣಾ ಪ್ರಮಾಣಪತ್ರ (ಐಸಿ), ತೆರಿಗೆ ಕಾರ್ಡು, ಇಟಿಸಿ, ಪರವಾನಿಗೆ, ಎಂಡಿಎಲ್, ಇತ್ಯಾದಿಗಳನ್ನು ಪರಿಶೀಲನೆಗಾಗಿ ಒದಗಿಸುವಲ್ಲಿ ವಿಫಲರಾಗಿದ್ದರು. ಈ ಮೋಟಾರು ವಾಹನಗಳನ್ನು ಬಿಡುಗಡೆಗೊಳಿಸಲಾಗಿದ್ದಿತು ಹಾಗೂ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ್ದಂತೆ ಈ ದಾಖಲೆಗಳನ್ನು ತದನಂತರ 15 ದಿನಗಳ ಒಳಗೆ ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಈ ನಿಟ್ಟಿನಲ್ಲಿ ಪ್ರಕರಣಗಳನ್ನು ಅನುಸರಿಸಲು ಹಾಗೂ ಅಂತಹ ತಪ್ಪಿತಸ್ಥರಿಂದ ಅನ್ವಯಗೊಳ್ಳುವ ಸಂಯೋಜನಾ ದಂಡದ ಮೊತ್ತವನ್ನು ವಸೂಲಾತಿ ಮಾಡುವಲ್ಲಿ ಇಲಾಖೆಯು ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ.

ಅಲ್ಲದೆಯೇ, ಒಂದು ಮೋಟಾರು ವಾಹನವನ್ನು ತನಿಖೆ/ಪರೀಕ್ಷಣೆ ಮಾಡಿದಾಗಲೆಲ್ಲಾ, ಪರೀಕ್ಷಣೆ ಮಾಡಲು ಅನುಮತಿ ನೀಡಲಾಗಿರುವ ವ್ಯಕ್ತಿಯು, ತೆರಿಗೆ ಪಾವತಿ ವಿವರಗಳು, ಪರವಾನಗಿ ಷರತ್ತುಗಳ ಉಲ್ಲಂಘನೆ, ನೋಂದಣಿಯ ನಂತರ ವಾಹನವನ್ನು ಮಾರ್ಪಾಟು ಮಾಡಿರುವುದು, ಈ ಹಿಂದೆ ಮಾಡಲಾಗಿರುವ ಅಪರಾಧ/ತಪ್ಪುಗಳು, ಇತ್ಯಾದಿಗಳ ಬಗ್ಗೆ ಮೋಟಾರು ವಾಹನದ ಬಗ್ಗೆ ಸಂಪೂರ್ಣ ವಿವರಗಳನ್ನು ಪರೀಕ್ಷಿಸುವ ಸ್ಥಿತಿಯಲ್ಲಿರುವುದಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳನ್ನು ಗಣಕೀಕರಣಗೊಳಿಸಿರದಿದ್ದ ಕಾರಣ, ಮೋಟಾರು ವಾಹನಗಳ ಪರೀಕ್ಷಣೆಯ ವೇಳೆಯಲ್ಲಿ ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ರವರು ಈ ಹಿಂದಿನ ತಪ್ಪು/ಅಪರಾಧಗಳ ವಿವರಗಳನ್ನು ವೀಕ್ಷಿಸಲು ಸಾಧ್ಯವಾಗುವುದಿಲ್ಲ. ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ರವರಿಗೆ, ತೆರಿಗೆ ಪಾವತಿಯನ್ನು ಮಾಡದಿರುವುದು, ವಾಹನಗಳ ವರ್ಗೀಕರಣ ಯಾವುದೇ ಆಕ್ಷೇಪಣೆಗಳೂ ಇರುವುದಿಲ್ಲ ಎಂಬುದಾಗಿ ನೀಡಲಾಗುವ ಪ್ರಮಾಣಪತ್ರ, ಇತ್ಯಾದಿಗಳ ಬಗ್ಗೆ ಅನುಸರಿಸದಿರುವುದನ್ನು ಪತ್ತೆಹಚ್ಚುವ ಸಲುವಾಗಿ ಅಗತ್ಯವಿರುವಂತಹ ರಾಷ್ಟ್ರೀಯ ರಿಜಿಸ್ಟರ್ ಹಾಗೂ ರಾಜ್ಯ ರಿಜಿಸ್ಟರ್‌ಗಳನ್ನೂ ಸಹ ವೀಕ್ಷಿಸಲು ಸಾಧ್ಯವಾಗುವುದಿಲ್ಲ.

ವಿವಿಧ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳ ದಾಖಲೆಗಳನ್ನು, ರಾಷ್ಟ್ರೀಯ ರಿಜಿಸ್ಟರ್‌ನ ದಾಖಲೆಗಳ, ಇತ್ಯಾದಿಗಳ ನಡುವೆ ಅಂತಹ ಮೋಟಾರು ವಾಹನಗಳ ವಿವರಗಳನ್ನು ಅಡ್ಡಪರಿಶೀಲನೆ ಮಾಡುವ ಮೂಲಕ, ದಾಖಲೆಗಳನ್ನು ಒದಗಿಸದಿದ್ದಂತಹ ಕಾರಣದಿಂದಾಗಿ ನಮೂದಾಗಿದ್ದಂತಹ ಪ್ರಕರಣಗಳನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು ಹಾಗೂ ದಾಖಲೆಗಳನ್ನು ಒದಗಿಸದಿದ್ದ ಕಾರಣದಿಂದಾಗಿ ದಾಖಲಿಸಲಾಗಿದ್ದಂತಹ ಪ್ರಕರಣಗಳ ಪೈಕಿ 63 ಮೋಟಾರು ವಾಹನಗಳು, ತೆರಿಗೆಯನ್ನು ಪಾವತಿಸದಿರುವುದು, ಪರವಾನಿಗೆ ಷರತ್ತುಗಳ ಉಲ್ಲಂಘನೆ, ನೋಂದಣಿಯ ನಂತರ ವಾಹನವನ್ನು ಪರಿವರ್ತಿಸಿರುವುದು, ಇತ್ಯಾದಿ ಗುರುತರ ಅಪರಾಧಗಳು ಅವುಗಳ ವಿರುದ್ಧ ಬಾಕಿ ಇದ್ದವು ಎಂಬುದನ್ನು ಗಮನಿಸಿತು. ಈ ಅಪರಾಧಗಳು ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ಗಳ ಗಮನಕ್ಕೆ ಬಾರದೇ ಹೋದವು. ಕೆಲವು ಪ್ರಕರಣಗಳಲ್ಲಿ, ಪರೀಕ್ಷಣಾ ಅಧಿಕಾರಿಗಳು ವಶಪಡಿಸಿಕೊಂಡಂತಹ ದಾಖಲೆಗಳಿಗೆ ಸಂಬಂಧಿಸಿದಂತೆ ಇತರೆ ಕಚೇರಿಗಳಿಂದ (ಅಧಿಕಾರವ್ಯಾಪ್ತಿಯ ಕಚೇರಿ) ನಕಲು ಪ್ರತಿಯನ್ನು ನೀಡಲಾಗಿದ್ದಿತು. ಮೇಲೆ ತಿಳಿಸಲಾದ 63 ವಾಹನಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಈ ಕೆಳಗೆ ದೃಷ್ಟಾಂತ ರೂಪದಲ್ಲಿ ನೀಡಲಾಗಿದೆ:

- 13 ಪ್ರಕರಣಗಳಲ್ಲಿ, ಈ ಮೂಲ ದಾಖಲೆಗಳನ್ನು ಇತರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಶಪಡಿಸಿಕೊಂಡಿರುವ ಅರಿವಿಲ್ಲದೆಯೇ ಮೂಲ ನೋಂದಣಿ ಪ್ರಮಾಣಪತ್ರ, ಎಂಡಿಎಲ್, ಪರವಾನಿಗೆ, ಇತ್ಯಾದಿ ದಾಖಲೆಗಳನ್ನು ಮೂಲ ನೋಂದಣಿ ಅಧಿಕಾರಿಗಳು/ಮೂಲ ಪರವಾನಗಿ ಅಧಿಕಾರಿಗಳು ನಕಲು ಪ್ರತಿಗಳಲ್ಲಿ ನೀಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.
- ಆರು[8] ಉಪ ಆಯುಕ್ತರುಗಳು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ತನಿಖಾ ಠಾಣೆಗಳಲ್ಲಿ ಆಗಸ್ಟ್ 2010ರಿಂದ ನವೆಂಬರ್ 2016ರವರೆಗಿನ ಅವಧಿಯಲ್ಲಿ 23 ಮೋಟಾರು ವಾಹನಗಳಿಂದ ₹ 87.40 ಲಕ್ಷ ಮೊತ್ತದಷ್ಟು ತೆರಿಗೆ ಮೊತ್ತವು ಬಾಕಿಯಿರುವುದು

[8] ಬೆಂಗಳೂರು (ಕೇಂದ್ರ, ಇಲೆಕ್ಟ್ರಾನಿಕ್ಸ್ ಸಿಟಿ, ಹಾಸನ, ಹುಮನಾಬಾದ್ ತನಿಖಾ ಠಾಣೆ, ಕಲಬುರಗಿ ಮತ್ತು ಮಂಡ್ಯ.

ಕಂಡುಬಂದಿತು. ಈ ವಾಸ್ತವಾಂಶವನ್ನು ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ಗಳು ವಾಹನಗಳ ಪರೀಕ್ಷಣೆಯ ವೇಳೆಯಲ್ಲಿ ಗಮನಿಸಲಿಲ್ಲ ಹಾಗೂ ತತ್ಪರಿಣಾಮವಾಗಿ ಅಂತಹ ಮೋಟಾರು ವಾಹನಗಳ ವಿರುದ್ಧ ಕೇವಲ ದಾಖಲೆಗಳನ್ನು ಒದಗಿಸದಿದ್ದ ಆರೋಪಗಳನ್ನು ದಾಖಲಿಸಲಾಗಿದ್ದಿತು.

- ನಿರ್ದಿಷ್ಟಪಡಿಸಲಾದುದಕ್ಕಿಂತ ಅಧಿಕ ಆಸನಗಳು ಹಾಗೂ ಮಲಗುವ ಸೌಲಭ್ಯವನ್ನು ಹೊಂದಿರುವುದರೊಂದಿಗೆ ಸಜ್ಜುಗೊಂಡಿದ್ದ 'ಕ್ಯಾಂಪರ್ಸ್ ವ್ಯಾನು''[9] ಎಂಬುದಾಗಿ ವರ್ಗೀಕರಿಸಲಾಗಿದ್ದ 11 ಮೋಟಾರು ವಾಹನಗಳಿದ್ದವು (ಎರಡು ಪ್ರಕರಣಗಳು ಇತರೆ ರಾಜ್ಯದಲ್ಲಿ ನೋಂದಣಿಯಾಗಿದ್ದ ಮೋಟಾರು ವಾಹನಗಳಿಗೆ ಸಂಬಂಧಿಸಿದ್ದವು). ಈ ವಾಸ್ತವಾಂಶವನ್ನು ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ಗಳು ಸಿಆರ್‌ಗಳಲ್ಲಿ ದಾಖಲಿಸಿದ್ದರಾದರೂ, ಮೋಟಾರು ವಾಹನ ಅಧಿನಿಯಮದ ಪರಿಚ್ಛೇದ 207ರ ಅಡಿಯಲ್ಲಿ ಅನುವು ಮಾಡಿರುವಂತೆ ವಾಹನಗಳನ್ನು ವಶಪಡಿಸಿಕೊಂಡಿರಲಿಲ್ಲ.
- ನೋಂದಣಿಯ ನಂತರ ಮೋಟಾರು ವಾಹನಗಳನ್ನು ಮಾರ್ಪಾಟು ಮಾಡಿರುವುದಾಗಿ ಕಂಡುಬಂದಿದ್ದಂತಹ ಇತರೆ 12 ಪ್ರಕರಣಗಳಲ್ಲಿ ₹ 32.38 ಲಕ್ಷ ಮೊತ್ತದಷ್ಟು ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಸೂಲಾತಿ ಮಾಡಿರಲಿಲ್ಲ. ವಾಹನಗಳನ್ನು ಮಾರ್ಪಾಟು ಮಾಡಿರುವ ವಾಸ್ತವಾಂಶವನ್ನು ಸಿಆರ್‌ನಲ್ಲಿ ದಾಖಲಿಸಲಾಗಿದ್ದಿತಾದರೂ, ಮೇಲೆ ತಿಳಿಸಲಾದಂತಹ ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು ಕರ್ನಾಟಕ ಮೋವಾತೆ ಅಧಿನಿಯಮದ ಪರಿಚ್ಛೇದ 8–ಬಿ[10] ಅನುಸಾರ ವಸೂಲಾತಿ ಮಾಡಿರಲಿಲ್ಲ. ಮುಂದುವರೆದು, ಅಂತಹ ಮೋಟಾರು ವಾಹನಗಳ ವಿರುದ್ಧ ದಾಖಲಿಸಲಾಗಿದ್ದ ಆರೋಪಗಳು ದಾಖಲೆಗಳನ್ನು ಒದಗಿಸದಿದ್ದ ಕಾರಣದಿಂದಾಗಿ ಎಂಬುದನ್ನು ಗಮನಿಸಬೇಕು.
- ಎರಡು ಮೋಟಾರು ವಾಹನಗಳಿಗೆ ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗ್ಗೆ ಕರ್ನಾಟಕ ರಾಜ್ಯದಿಂದ ಪ್ರಮಾಣಪತ್ರಗಳನ್ನು ನೀಡಲಾಗಿದ್ದಿತು (ಜುಲೈ 2006 ಮತ್ತು ಸೆಪ್ಟಂಬರ್ 2008ರಲ್ಲಿ). ಈ ಮೋಟಾರು ವಾಹನಗಳು ಕರ್ನಾಟಕ ರಾಜ್ಯದಲ್ಲಿ ಸಂಚರಿಸುತ್ತಿದ್ದವು, ಅವುಗಳ ವಿರುದ್ಧ ಜುಲೈ 2011 ಮತ್ತು ಮೇ 2014ರಲ್ಲಿ ದಾಖಲೆಗಳನ್ನು ಒದಗಿಸದಿದ್ದುದಕ್ಕಾಗಿ ಆರೋಪಗಳನ್ನು ದಾಖಲಿಸಲಾಗಿದ್ದಿತು. ರಾಷ್ಟ್ರೀಯ ರಿಜಿಸ್ಟರ್‌ನ ಜೊತೆ ಅಡ್ಡಪರಿಶೀಲನೆ ಮಾಡಲಾಗಿ, ಯಾವ ರಾಜ್ಯಗಳಿಗೆ ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗ್ಗೆ ಪ್ರಮಾಣಪತ್ರಗಳನ್ನು ನೀಡಲಾಗಿದ್ದಿತೋ, ಆ ರಾಜ್ಯಗಳಲ್ಲಿ ಈ ಮೋಟಾರು ವಾಹನಗಳು ನೋಂದಣಿಯಾಗಿರಲಿಲ್ಲ ಹಾಗೂ ಅಲ್ಲದೆಯೇ ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗೆಗಿನ ಪ್ರಮಾಣಪತ್ರವನ್ನು ನೀಡಿರುವ ಅಧಿಕಾರಿವು ರದ್ದುಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದ್ದರಿಂದ ಈ ಮೋಟಾರು ವಾಹನಗಳು, ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗೆಗಿನ ಪ್ರಮಾಣಪತ್ರವನ್ನು ನೀಡಿದನಂತರವೂ, ತೆರಿಗೆ ಪಾವತಿಯನ್ನು ಮಾಡದೆಯೇ ರಾಜ್ಯದಲ್ಲಿಯೇ ಸಂಚರಿಸುತ್ತಿರುವ ಸಂಭಾವ್ಯತೆಯನ್ನು ತಳ್ಳಿಹಾಕುವಂತಿಲ್ಲ. ದಂಡದ ಜೊತೆಗೆ ಸಂಭಾವ್ಯ ತೆರಿಗೆ ಬಾಧ್ಯತೆಯು ₹ 25.98 ಲಕ್ಷ ಆಗುತ್ತದೆ.
- ಎರಡು ಮೋಟಾರು ವಾಹನಗಳಿಗೆ, ಕರ್ನಾಟಕ ರಾಜ್ಯಕ್ಕೆ ವಲಸೆಹೋಗುವ ಸಲುವಾಗಿ, ಇತರೆ ರಾಜ್ಯಗಳಿಂದ ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗೆಗಿನ ಪ್ರಮಾಣಪತ್ರವನ್ನು ನೀಡಲಾಗಿದ್ದಿತು. ಆದಾಗ್ಯೂ, ಈ ಮೋಟಾರು ವಾಹನಗಳು ಕರ್ನಾಟಕ ರಾಜ್ಯದಲ್ಲಿ ನೋಂದಣಿ ಮಾಡಿಸಿಕೊಂಡಿರಲಿಲ್ಲ ಹಾಗೂ ರಾಜ್ಯದಲ್ಲಿ ತೆರಿಗೆಗಳನ್ನು ಪಾವತಿಸದೆಯೇ ಸಂಚರಿಸುತ್ತಿದ್ದವು. ಮಾರ್ಚ್ 2007ರಿಂದ ಈ ವಾಹನಗಳಿಂದ ₹ 3.02 ಲಕ್ಷ ಮೊತ್ತದಷ್ಟು ತೆರಿಗೆಯು ಬಾಕಿಯಿದ್ದಿತು.

**4.4.6.3** ಯಾವ ಮೋಟಾರು ವಾಹನಗಳ ವಿರುದ್ಧ ಆರೋಪಗಳ ದಾಖಲೆಗಳು ಬಾಕಿಯಿದ್ದವೋ, ಅಂತಹ ವಾಹನಗಳು, ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗೆಗಿನ ಪ್ರಮಾಣಪತ್ರಗಳು, ಅನುಮತಿ ಪ್ರಮಾಣಪತ್ರಗಳು, ದೈಹಿಕವಾಗಿ ದೃಢತೆಯ ಪ್ರಮಾಣಪತ್ರಗಳು, ಪರವಾನಿಗಳ ರದ್ದತಿ/ನವೀಕರಣ, ಈ ರೀತಿಯಾಗಿ ಅನ್ಯ ದಾಖಲೆಗಳಿಗಾಗಿ ಇಲಾಖೆಯನ್ನು ಸಂಪರ್ಕಿಸಿದವು, ಇಲಾಖೆಯು ಬಾಕಿಯಿರುವಂತಹ ಆರೋಪಗಳ ದಾಖಲೆಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು ಹಾಗೂ ಇದರ ತತ್ಪರಿಣಾಮವಾಗಿ ಅಪರಾಧ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ. ಈ ಅಂಶದ ಬಗ್ಗೆ ಒತ್ತಿಹೇಳುವ ಸಲುವಾಗಿ ಕೆಲವು ದೃಷ್ಟಾಂತಗಳನ್ನು ಈ ಕೆಳಗೆ ವಿವರಿಸಲಾಗಿದೆ:

---

[9] ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 2(1)ರ ಜೊತೆಯಲ್ಲಿ ಓದಲ್ಪಡುವ ಇಲಾಖೆಯಿಂದ ನೀಡಲಾಗಿರುವ ಅಧಿಸೂಚನೆಯ ಪ್ರಕಾರ, "ಕ್ಯಾಂಪರ್ಸ್ ವ್ಯಾನು ಅಂದರೆ ಅಡುಗೆ ಮಾಡುವ ಹಾಗೂ ಸರಕುಸಾಮಗ್ರಿ ಸಂಗ್ರಹಣಾ ಅನುಕೂಲತೆಯನ್ನು ಹೊಂದಿರುವ ವಾಸದ ಸ್ಥಳವನ್ನು ಒಳಗೊಂಡಂತೆ ನಿರ್ಮಿಸಲಾಗಿರುವ ಒಂದು ವಿಶೇಷ ಪ್ರವರ್ಗದ ವಾಹನ, ಚಾಲಕರ ಆಸನದ ಜೊತೆಗೆ, ಅದು ಮಲಗುವ ವ್ಯವಸ್ಥೆಗೆ ಪರಿವರ್ತಿಸಬಹುದಾದ ಎಂಟು ಸೀಟುಗಳನ್ನು ಮೀರಿರಬಾರದು.

[10] ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 8–ಬಿ ಅನುಸಾರ, ನೋಂದಣಿಯನಂತರ ಒಂದು ವಾಹನವನ್ನು ಅಧಿಕ ದರದ ತೆರಿಗೆಯನ್ನು ಆಕರ್ಷಿಸುವ ಮತ್ತೊಂದು ವಾಹನಕ್ಕೆ ಮಾರ್ಪಾಟು ಮಾಡಿದಲ್ಲಿ, ಅಂತಹ ಮೋಟಾರು ವಾಹನವು ಈಗಾಗಲೇ ಪಾವತಿಸಿರುವ ತೆರಿಗೆ ಹಾಗೂ ಅಧಿಕ ದರದ ತೆರಿಗೆ ಬಾಧ್ಯತೆಯ ವ್ಯತ್ಯಾಸದ ಮೊತ್ತದ ಎರಡರಷ್ಟನ್ನು ಪಾವತಿಸತಕ್ಕದ್ದು.

- ಐದು[11] ಉಪ–ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಕಚೇರಿಗಳು/ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ 39 ಮೋಟಾರು ವಾಹನಗಳ ವಿರುದ್ಧ 110 ಸಿಆರ್‌ಗಳು ಒಟ್ಟಾರೆ ₹ 6.14 ಲಕ್ಷ ಮೊತ್ತದಷ್ಟು ಸಂಯೋಜನಾ ದಂಡದೊಂದಿಗೆ ಬಾಕಿಯಿದ್ದವು. ಒಂದು ಏಕೈಕ ವಾಹನದ ವಿರುದ್ಧವಾಗಿ ವಿವಿಧ ಅಪಾದನೆಗಳಿದ್ದು, ಅವುಗಳು ಗಮನಕ್ಕೆ ಬಾರದೇ ಹೋಗಿದ್ದ ಕಾರಣ ಎರಡನೆಯ ಹಾಗೂ ತದನಂತರದ ಅಪರಾಧ/ಆರೋಪಗಳಿಗಾಗಿ ಅಧಿಕ ಪ್ರಮಾಣದ ದಂಡವನ್ನು ವಿಧಿಸದಿರುವುದು ಎಂಬುದನ್ನು ಇದು ಸೂಚಿಸುತ್ತದೆ.
- 154 ಪ್ರಕರಣಗಳಲ್ಲಿ, ಈ ಮೋಟಾರು ವಾಹನಗಳ ಮೇಲೆ ಇಲಾಖಾ ಶಾಸನಬದ್ಧ ಅಧಿಕಾರಿಗಳು ಈ ಮೊದಲು ದಾಖಲಿಸಿದ್ದ ಆರೋಪಗಳನ್ನು ವಿಲೇವಾರಿ ಮಾಡದೆಯೇ, ದೈಹಿಕ ದೃಢತಾ ಪ್ರಮಾಣಪತ್ರಗಳನ್ನು ನವೀಕರಿಸಲಾಗಿದ್ದಿತು ಹಾಗೂ ಅನುಮತಿ ಪ್ರಮಾಣಪತ್ರಗಳನ್ನು ನೀಡಲಾಗಿದ್ದಿತು, ಇದು ₹ 1.17 ಲಕ್ಷ ಮೊತ್ತದಷ್ಟು ಸಂಯೋಜನಾ ದಂಡವನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿದ್ದಿತು. ಮೂಲ ನೋಂದಣಿ ಅಧಿಕಾರಿಗಳಿಂದ ದಾಖಲಿಸಲ್ಪಟ್ಟಿದ್ದ ಆರೋಪಗಳ ಅಂತಹ ಪ್ರಕರಣಗಳ ಪೈಕಿ 126 ಪ್ರಕರಣಗಳನ್ನು ದೈಹಿಕ ದೃಢತೆಯ ಪ್ರಮಾಣಪತ್ರಗಳನ್ನು ನವೀಕರಿಸುವ ಹಾಗೂ ಅನುಮತಿ ಪ್ರಮಾಣಪತ್ರ/ಯಾವುದೇ ಆಕ್ಷೇಪಣೆಗಳು ಇರದಿರುವ ಬಗ್ಗೆ ಪ್ರಮಾಣಪತ್ರಗಳನ್ನು ನೀಡುವ ವೇಳೆಯಲ್ಲಿ ಇತ್ಯರ್ಥಗೊಳಿಸಿರಲಿಲ್ಲ.
- ಎರಡು ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಆರೋಪ/ಅಪರಾಧ ದಾಖಲೆಗಳನ್ನು ಇತ್ಯರ್ಥಗೊಳಿಸದೆಯೇ ಪರವಾನಿಗೆಗಳನ್ನು ರದ್ದುಗೊಳಿಸಲಾಗಿದ್ದಿತು/ನವೀಕರಿಸಲಾಗಿದ್ದಿತು.

ಈ ಸಂಬಂಧವಾಗಿ, ಅವರುಗಳಿಂದ (ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಂದ) ದಾಖಲಿಸಿರುವಂತಹ ಅಪಾಧನೆ/ಆರೋಪಗಳ ಇಂದಿನದಿನದನ್ನಾಗಿ ಮಾಡಲಾದ ಮಾಹಿತಿಯನ್ನು ಊಡಿಕೆ ಮಾಡಲಾಗಿರುವಂತಹ ಕೈ–ಉಪಕರಣವನ್ನು ನೀಡಲಾಗಿರುವ ಪೊಲೀಸು ಇಲಾಖೆಯ ಇನ್ಸ್‌ಪೆಕ್ಟರ್‌ಗಳಲ್ಲಿರುವ ಮಾಹಿತಿಯ ಜೊತೆ ಹೋಲಿಕೆ ಮಾಡಬಹುದು. ಇದು ಬಾಕಿಯಿರುವ ಆರೋಪ/ಅಪಾಧನೆಗಳನ್ನು ಇತ್ಯರ್ಥಪಡಿಸುವಲ್ಲಿನ ದಕ್ಷತೆಯನ್ನು ಹಾಗೂ ಸಂಚಾರಿ ಪೊಲೀಸ್ ಇಲಾಖೆಯಿಂದ ದಂಡಗಳ ವಸೂಲಾತಿಯನ್ನು ಉತ್ತಮಗೊಳಿಸುತ್ತದೆ. ಸಂಚಾರಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ನೀಡಿರುವ ಸಾಧನವು, ಪರೀಕ್ಷಣೆ ಮಾಡಲಾಗಿರುವ ಮೋಟಾರು ವಾಹನಗಳು ಹಾಗೂ ಮೋಟಾರು ವಾಹನಗಳ ವಿರುದ್ಧವಾಗಿ ಬಾಕಿಯಿರುವಂತಹ ಅಪಾದನೆ/ಆರೋಪ ದಾಖಲೆಗಳು ಮೋಟಾರು ವಾಹನಗಳ ಇನ್ಸ್‌ಪೆಕ್ಟರ್‌ಗಳಿಗೆ ಮಾಹಿತಿಯನ್ನು ತ್ವರಿತವಾಗಿ/ತತ್‌ಕ್ಷಣವೇ ತಿಳಿಸುವುದರಿಂದ ಅದೇ ರೀತಿಯ ಮಾದರಿಯನ್ನು ಸಾರಿಗೆ ಇಲಾಖೆಗೂ ಅಳವಡಿಸಿಕೊಳ್ಳಬೇಕು.

ಈ ಪ್ರಕರಣಗಳನ್ನು ಅಕ್ಟೋಬರ್ 2016ರಲ್ಲಿ ಇಲಾಖೆ/ಸರ್ಕಾರದ ಗಮನಕ್ಕೆ ತರಲಾಯಿತು. ಉತ್ತರವನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

### 4.4.7 ಅನುಮತಿ ನೀಡಬಹುದಾದ ಮಿತಿಯನ್ನು ಮೀರಿದ ಸರಕುಗಳನ್ನು ವಾಹನಗಳಿಂದ ಕೆಳಗಿಳಿಸದೆಯೇ ಹಾಗೂ ಸಂಯೋಜನಾ ದಂಡವನ್ನು ವಸೂಲಾತಿ ಮಾಡದೆಯೇ ಸಾಗಣೆಗೆ ಅನುವು ಮಾಡಿಕೊಟ್ಟಿದ್ದುದು

ಮೋಟಾರು ವಾಹನ ಅಧಿನಿಯಮದ ಪರಿಚ್ಛೇದ 114ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 113ರ ಅನುಸಾರ ಹಾಗೂ ಸಾರಿಗೆ ಮತ್ತು ರಸ್ತೆ ಸುರಕ್ಷತೆಗಾಗಿನ ಆಯುಕ್ತರವರ ಸುತ್ತೋಲೆ ನಿರ್ದೇಶನಗಳ[12] ಅನುಸಾರ, ಅನುಮತಿ ನೀಡಬಹುದಾದ ಪ್ರಮಾಣಕ್ಕಿಂತ ಅಧಿಕ ಪ್ರಮಾಣದಲ್ಲಿ ಸರಕುಗಳನ್ನು ಸಾಗಣೆ ಮಾಡುವ ಮೋಟಾರು ವಾಹನದಿಂದ, ಅಂತಹ ವಾಹನಗಳನ್ನು ಮುಂದಕ್ಕೆ ಚಲಿಸಲು ಅನುಮತಿ ನೀಡುವ ಮೊದಲು ಅಧಿಕ ಪ್ರಮಾಣದಲ್ಲಿರುವ ಸರಕುಗಳನ್ನು ಇಳಿಸತಕ್ಕದ್ದು.

ಮೋಟಾರು ವಾಹನ ಅಧಿನಿಯಮದ ಪರಿಚ್ಛೇದ 200ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 194ರ ಅನುಸಾರ, ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದಂಡವನ್ನು ವಿಧಿಸುವ ಮೂಲಕ ಅಪರಾಧವನ್ನು ಸಂಯೋಜನೆಗೊಳಿಸಬಹುದು. ಮುಂದುವರೆದು, ಅಧಿಕ ಪ್ರಮಾಣದ ಹೊರೆಯೊಂದಿಗಿನ ಮೋಟಾರು ವಾಹನಗಳು ರಸ್ತೆಗಳ ಗುಣಮಟ್ಟಕ್ಕೆ, ಅಧಿಕ ಮಟ್ಟದ ಹೊಗೆಸೂಸುವಿಕೆಯ ಕಾರಣ ಪರಿಸರಕ್ಕೆ ಹಾಗೂ ಇಂತಹ ವಾಹನಗಳು ಉರುಳಿ ಬೀಳುವುದರಿಂದ/ತಲೆಕೆಳಗಾಗುವುದರಿಂದ ರಸ್ತೆ ಸುರಕ್ಷತೆಗೆ ಒಂದು ಸಂಭಾವ್ಯ ಅಪಾಯವನ್ನು ತಂದೊಡ್ಡುತ್ತವೆ ಎಂಬುದನ್ನು ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸಿತು.

ಅನುಮತಿ ನೀಡಲಾಗಿರುವ ಪ್ರಮಾಣಕ್ಕಿಂತ ಅಧಿಕ ಪ್ರಮಾಣದಲ್ಲಿ ಸರಕುಗಳನ್ನು ಸಾಗಣೆ ಮಾಡಿದ್ದಂತಹ ಮೋಟಾರು ವಾಹನಗಳ ವಿರುದ್ಧ ಅಪಾದನೆಯನ್ನು ದಾಖಲಿಸಲಾಗಿದ್ದಿತಾದರೂ, ಅವುಗಳನ್ನು ಅವುಗಳು ಸಾಗಣೆ

---

[11] ಬೆಂಗಳೂರು (ದಕ್ಷಿಣ0, ಧಾರವಾಡ, ಮಂಗಳೂರು, ಕೋಲಾರ ಹಾಗೂ ನೆಲಮಂಗಲ.

[12] ಸಾರಿಗೆ ಮತ್ತು ರಸ್ತೆ ಸುರಕ್ಷತೆಗಾಗಿನ ಆಯುಕ್ತರವರು 20 ಸೆಪ್ಟಂಬರ್ 2013ರಂದು ನೀಡಿದ್ದ ಸುತ್ತೋಲೆ ನಿರ್ದೇಶನಗಳು.

ಮಾಡುತ್ತಿದ್ದ ಅಧಿಕ ಪ್ರಮಾಣದ ಸರಕುಗಳನ್ನು ಕೆಳಕ್ಕೆ ಇಳಿಸದೆಯೇ ಮುಂದಕ್ಕೆ ಹೋಗಲು ಒಪ್ಪಿಕೊಳ್ಳಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಕ್ಕೆ ಸಂಬಂಧಿಸಿದಂತೆ ವಿವರಗಳು ಈ ಕೆಳಗಿನಂತಿವೆ:

**4.4.7.1** ರಾಜ್ಯದಲ್ಲಿ ನೋಂದಣಿ ಮಾಡಿಸಿಕೊಂಡಿದ್ದ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ, ಇಲಾಖೆಯು ಗಮನಿಸಿದ ಅಧಿಕ ಪ್ರಮಾಣದಲ್ಲಿ ಸರಕುಗಳನ್ನು ಸಾಗಣೆ ಮಾಡಿದ್ದಂತಹ 384 ಪ್ರಕರಣಗಳಿದ್ದವು, ಅಂತಹ ಮೋಟಾರು ವಾಹನಗಳನ್ನು ಮುಂದಕ್ಕೆ ಚಲಿಸಲು ಅನುಮತಿ ನೀಡುವ ಮೊದಲು ಅವುಗಳು ಸಾಗಣೆ ಮಾಡುತ್ತಿದ್ದ ಅಧಿಕ ಪ್ರಮಾಣದ ಸರಕುಗಳನ್ನು ಕೆಳಕ್ಕೆ ಇಳಿಸುವಂತೆ ಮಾಡಿರಲಿಲ್ಲ. ಸಂಬಂಧಿತ ಅಧಿಕಾರಿಗಳು ಈ ಪ್ರಕರಣಗಳನ್ನು ಸಂಯೋಜನಾ ದಂಡವನ್ನು ಪಾವತಿಸುವ ಮೂಲಕ ಇತ್ಯರ್ಥಗೊಳಿಸಿಕೊಳ್ಳುವಂತೆ ಮೋಟಾರು ವಾಹನಗಳಿಗೆ ತಿಳಿಸಲು ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು, ಇದು ₹ 62.13 ಲಕ್ಷ ಮೊತ್ತದಷ್ಟು ಸಂಯೋಜನಾ ದಂಡವನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿದ್ದಿತು.

**4.4.7.2** ಮುಂದುವರೆದು, 11[13] ಉಪ–ಸಾರಿಗೆ ಆಯುಕ್ತರುಗಳು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ತನಿಖಾ ಠಾಣೆಗಳಲ್ಲಿ 54 ಪ್ರಕರಣಗಳು ಇತರೆ ರಾಜ್ಯಗಳಿಗೆ ಸಂಬಂಧಿಸಿದ್ದ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಮಾಣಕ್ಕಿಂತ ಅಧಿಕ ಪ್ರಮಾಣದಲ್ಲಿದ್ದ ಸರಕುಗಳನ್ನು ಹೊರಕ್ಕೆ ಇಳಿಸಿರದ ಅಪರಾಧ/ಆರೋಪಗಳನ್ನು ದಾಖಲಿಸಲಾಗಿದ್ದಿತು. ಇಲ್ಲಿಯೂ ಕೂಡ ಸಂಯೋಜನಾ ದಂಡವನ್ನು ವಿಧಿಸುವ ಸಲುವಾಗಿ ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ, ಇದರಿಂದಾಗಿ, ₹ 6.06 ಲಕ್ಷ ಮೊತ್ತದಷ್ಟು ಸಂಯೋಜನಾ ದಂಡವನ್ನು ವಿಧಿಸದಿರುವಲ್ಲಿ ಪರಿಣಮಿಸಿದ್ದಿತು. ಇತರೆ ರಾಜ್ಯಗಳಲ್ಲಿ ನೋಂದಣಿಯಾಗಿರುವ ಮೋಟಾರು ವಾಹನಗಳನ್ನು ಅನುಸರಿಸುವುದು ಸ್ವಲ್ಪಮಟ್ಟಿಗೆ ಕಷ್ಟಕರವಾದ್ದರಿಂದ ಹಾಗೂ ಅಂತಹ ದಂಡಗಳನ್ನು ವಸೂಲಾತಿ ಮಾಡುವ ಸಂಭಾವ್ಯತೆಯು ಕಷ್ಟಸಾಧ್ಯವಾಗುವುದರಿಂದ ಸ್ಥಳದಲ್ಲಿಯೇ ಸಂಯೋಜನಾ ದಂಡವನ್ನು ವಸೂಲಾತಿ ಮಾಡುವುದು ಅತ್ಯಗತ್ಯವಾಗಿರುತ್ತದೆ ಎಂಬುದಾಗಿ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತಿದೆ.

ಮುಂದುವರೆದು, ಕಂಡಿಕೆಗಳು 4.4.7.1ರಿಂದ 4.4.7.2ರಲ್ಲಿ ತಿಳಿಸಲಾಗಿರುವ 438 ವಾಹನಗಳ ಪೈಕಿ 29 ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ, ದಾಖಲಿಸಲಾಗಿರುವಂತಹ ಅಪಾದನೆ/ಆರೋಪ ಪಟ್ಟಿಗಳ ಬಗ್ಗೆ ಮೂಲ ನೋಂದಣಿ ಅಧಿಕಾರಿಯವರು ಅಥವಾ ಪರವಾನಿಗೆಗಳನ್ನು ನೀಡುವ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡುವಲ್ಲಿನ ವಿಳಂಬ ಅಥವಾ ನೀಡದಿದ್ದ ಕಾರಣದಿಂದ ಅವುಗಳ ವಿರುದ್ಧವಾಗಿ ಬಾಕಿಯಿದ್ದಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸದೆಯೇ ರಾಜ್ಯದ ಹೊರಕ್ಕೆ ವರ್ಗಾವಣೆಗಾಗಿ ಯಾವುದೇ ಆಕ್ಷೇಪಣೆಗಳಿಲ್ಲದ ಪ್ರಮಾಣಪತ್ರಗಳನ್ನು ನೀಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಮಾದರಿ ಆಯ್ಕೆ ಮಾಡಿಕೊಳ್ಳಲಾಗಿದ್ದ ಯಾವುದೇ ಪ್ರಕರಣಗಳಲ್ಲಿಯೂ ಅಧಿಕ ಪ್ರಮಾಣದ ಸರಕುಗಳನ್ನು ಕೆಳಕ್ಕೆ ಇಳಿಸುವಂತೆ ಮಾಡುವಲ್ಲಿ ಇಲಾಖೆಯು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದ್ದರಿಂದ, ಅನುಮತಿ ನೀಡಲಾಗಿರುವ ಪ್ರಮಾಣಕ್ಕಿಂತ ಅಧಿಕ ಪ್ರಮಾಣದಲ್ಲಿ ಮಾಡಲಾಗುವ ಸರಕುಗಳ ಸಾಗಣೆಗಳಿಗೆ ಸಂಬಂಧಿಸಿದ ಅನುವುಗಳಿಗೆ ಇಲಾಖೆಯಲ್ಲಿ ಅನುಸರಣಾ ಕ್ರಮಗಳು ಇರಲಿಲ್ಲ.

ಈ ಪ್ರಕರಣಗಳನ್ನು ಅಕ್ಟೋಬರ್ 2016ರಲ್ಲಿ ಇಲಾಖೆ/ಸರ್ಕಾರದ ಗಮನಕ್ಕೆ ತರಲಾಯಿತು. ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 4.4.8 ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರದ ಜೊತೆ ಪ್ರಾದೇಶಿಕ ಸಾರಿಕೆ ಕಚೇರಿಗಳ ಸಮನ್ವಯತೆಯ ಕೊರತೆ

ಸಂಪೂರ್ಣ ರಾಜ್ಯದಲ್ಲಿ ಮಾರ್ಗ ಉಲ್ಲಂಘನೆಗಳು, ಅನುಮತಿ ನೀಡಿರುವುದಕ್ಕಿಂತ ಅಧಿಕ ಸಂಖ್ಯೆಯ ಪ್ರಯಾಣಿಕರೊಂದಿಗೆ ಸಂಚರಿಸುವುದು, ಪ್ರಯಾಣಿಕರ ಸರಕುಗಳಲ್ಲದೆ, ಇತರೆ ಸರಕುಗಳನ್ನು ಸಾಗಣೆ ಮಾಡುವುದು, ಗುತ್ತಿಗೆ ಆಧಾರದ ಮೇರೆಗಿನ ಮೋಟಾರು ವಾಹನಗಳು ನಿರ್ದಿಷ್ಟ ಊರಿನಿಂದ ಊರಿಗೆ ಬದಲಾಗಿ ಹಂತದಿಂದ ಹಂತಕ್ಕೆ ಕಾರ್ಯಾಚರಣೆ ನಡೆಸುವುದು, ಮುಂತಾದ ಪರವಾನಿಗೆ ಷರತ್ತುಗಳ ಉಲ್ಲಂಘನೆಗಾಗಿ ಉಪ–ಸಾರಿಗೆ ಆಯುಕ್ತರ ಕಚೇರಿಗಳು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ತನಿಖಾ ಠಾಣೆಗಳಲ್ಲಿ ದಾಖಲಿಸಲಾಗುವ ಅಪರಾಧ / ಆರೋಪ ದಾಖಲೆಗಳನ್ನು ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 86ರ ಅಡಿಯಲ್ಲಿ

[13] ಅತ್ತಿಬೆಲೆ ತನಿಖಾಠಾಣೆ, ಬೆಂಗಳೂರು (ಕೇಂದ್ರ), ಬೆಂಗಳೂರು (ದಕ್ಷಿಣ), ಇಲೆಕ್ಟ್ರಾನಿಕ್ಸ್ ಸಿಟಿ, ಧಾರವಾಡ, ಹಾಸನ, ಹುಮನಾಬಾದ್ ತನಿಖಾಠಾಣೆ, ಕಲಬುರಗಿ, ಕೋಲಾರ, ನೆಲಮಂಗಲ ಹಾಗೂ ಝುಳಕಿ ತನಿಖಾಠಾಣೆ.

ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ[14], ಕಳುಹಿಸಿಕೊಡಬೇಕು. ಈ ಪರಿಚ್ಛೇದದ ಅನುಸಾರ, ಪರವಾನಿಗೆಗಳನ್ನು ನೀಡುವ ಅಧಿಕಾರಿಗಳು ಪರವಾನಿಗೆ ನೀಡುವಿಕೆಗೆ ಸಂಬಂಧಿತ ಷರತ್ತುಗಳ ಉಲ್ಲಂಘನೆಯ ಪ್ರತಿಯಾಗಿ ಕ್ರಮವನ್ನು ತೆಗೆದುಕೊಳ್ಳಬಹುದು ಹಾಗೂ ಅಂತಹ ಪರವಾನಿಗೆಗಳನ್ನು ರದ್ದುಗೊಳಿಸಲು/ಅಮಾನತ್ತಿನಲ್ಲಿಡಲು ಅವರು ಅಧಿಕಾರವನ್ನು ಹೊಂದಿರುವರು. ಪರವಾನಿಗೆಗೆ ಸಂಬಂಧಿತ ಉಲ್ಲಂಘನೆಗಳಿಗಾಗಿ ಅಪರಾಧ/ಆರೋಪ ದಾಖಲೆಗಳನ್ನು ಸ್ವೀಕರಿಸಿದ ಕೂಡಲೆ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರವು, ತಪ್ಪಿತಸ್ಥರಿಗೆ ವಿವರಣೆಗಳನ್ನು ನೀಡಲು ಸೂಕ್ತ ಅವಕಾಶವನ್ನು ನೀಡಿದನಂತರ, ಪರವಾನಿಗೆಗಳನ್ನು ಅಮಾನತ್ತಿನಲ್ಲಿಡಲು/ರದ್ದುಗೊಳಿಸಲು ಒಂದು ಆದೇಶವನ್ನು ಜಾರಿಗೊಳಿಸಬೇಕು. ಪ್ರಕರಣವನ್ನು ಯಾವ ಕಚೇರಿಯಲ್ಲಿ ದಾಖಲಿಸಲಾಯಿತೋ ಆ ಕಚೇರಿಗೆ ಒಂದು ಪ್ರತಿಯನ್ನು ಕಳುಹಿಸುವುದರೊಂದಿಗೆ, ಅಂತಹ ಆದೇಶಗಳನ್ನು ಅಧಿಕಾರವ್ಯಾಪ್ತಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕು.

ಮಾದರಿ ಆಯ್ಕೆ ಮಾಡಿಕೊಳ್ಳಲಾದ ಪ್ರಕರಣಗಳಲ್ಲಿ, ಪರವಾನಿಗೆ ಷರತ್ತುಗಳ ಉಲ್ಲಂಘನೆಗಾಗಿ 163 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಪ್ರಕರಣಗಳ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು.

- ಏಪ್ರಿಲ್ 2008 ಹಾಗೂ ಮೇ 2015ರ ನಡುವೆ 128 ಪ್ರಕರಣಗಳನ್ನು ದಾಖಲಿಸಲಾಗಿದ್ದಿತು ಹಾಗೂ ಅವುಗಳನ್ನು ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗಿದ್ದಿತು. ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರವು, ಜುಲೈ 2013 ಹಾಗೂ ಜೂನ್ 2016ರಲ್ಲಿ ಈ ಮೋಟಾರು ವಾಹನಗಳ ಪರವಾನಿಗೆಗಳನ್ನು 10ದಿನಗಳಿಂದ 270 ದಿನಗಳವರೆಗಿನ ಅವಧಿಗೆ ಅಮಾನತ್ತಿನಲ್ಲಿಟ್ಟಿದ್ದಿತು. ಆದಾಗ್ಯೂ, ಮೂಲ ದಾಖಲೆಗಳನ್ನು ಪುನರ್–ಒಪ್ಪಿಸುವ ಮೂಲಕ ಅಮಾನತ್ತು ಆದೇಶವನ್ನು ಜಾರಿಗೊಳಿಸಲಾಗಿರುವುದೇ ಹಾಗೂ ಅಮಾನತ್ತಿನ ಅವಧಿಯಲ್ಲಿ ಅಂತಹ ಮೋಟಾರು ವಾಹನಗಳನ್ನು ಬಳಸದೇ ಇಡಲಾಗಿದ್ದಿತೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರವು ಇದರ ಬಗ್ಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ರಾಷ್ಟ್ರೀಯ ರಿಜಿಸ್ಟರ್‌ನ ಜೊತೆ ಅಡ್ಡಪರಿಶೀಲನೆ ಮಾಡಲಾಗಿ, ಈ ವಾಹನಗಳು, ಅವುಗಳ ಅಮಾನತ್ತಿನ/ರದ್ದತಿಗೊಂಡ ಅವಧಿಯಲ್ಲಿ ತೆರಿಗೆಗಳನ್ನು ನಿಯತವಾಗಿ ಪಾವತಿಸುತ್ತಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಹಾಗೂ ದಾಖಲೆಗಳನ್ನು ಪುನರ್–ಒಪ್ಪಿಸಿರಲಿಲ್ಲ ಹಾಗೂ ಮೋಟಾರು ವಾಹನಗಳು ಅಮಾನತ್ತು/ರದ್ದತಿಯ ಅವಧಿಯಲ್ಲಿ ರಸ್ತೆಯಲ್ಲಿ ಚಲಿಸುತ್ತಿದ್ದವು ಎಂಬ ತೀರ್ಮಾನಕ್ಕೆ ಬಂದಿತು.

- ಮೂರು[15] ಉಪ–ಸಾರಿಗೆ ಆಯುಕ್ತರವರ ಕಚೇರಿಗಳು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ತನಿಖಾ ಠಾಣೆಗಳಲ್ಲಿ, (ಅಖಿಲ ಭಾರತ ಪ್ರವಾಸಿ ಓಮ್ನಿ ಬಸ್ಸುಗಳು)/ಗುತ್ತಿಗೆ ಮೋಟಾರು ವಾಹನಗಳು, ಪ್ರಯಾಣಿಕರಿಗೆ ಸೇರಿರದ ವಾಣಿಜ್ಯ ಸರಕುಗಳನ್ನು ಸಾಗಣೆ ಮಾಡುತ್ತಿದ್ದುದಕ್ಕೆ ಸಂಬಂಧಿಸಿದಂತೆ 17 ಪ್ರಕರಣಗಳನ್ನು ದಾಖಲಿಸಲಾಗಿದ್ದಿತು. ಆದಾಗ್ಯೂ, ಅಂತಹ ಸರಕುಗಳನ್ನು ವಾಹನಗಳಿಂದ ಕೆಳಕ್ಕೆ ಇಳಿಸಿರಲಿಲ್ಲ ಅಥವಾ ವಶಕ್ಕೆ ತೆಗೆದುಕೊಂಡಿರಲಿಲ್ಲ ಹಾಗೂ ಅಂತಹ ಬಸ್ಸುಗಳನ್ನು ಸಂಯೋಜನಾ ದಂಡವನ್ನು ವಿಧಿಸದೆಯೇ ಬಿಡುಗಡೆಗೊಳಿಸಲಾಗಿದ್ದಿತು. ಮೋಟಾರು ವಾಹನಗಳ ಅಧಿನಿಯಮದ ಪರಿಚ್ಛೇದ 86ರ ಅಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ, ಈ ಪ್ರಕರಣಗಳನ್ನು ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಕಳುಹಿಸಿಕೊಟ್ಟಿರಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

- 15 ಪ್ರಕರಣಗಳಲ್ಲಿ, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರದಿಂದ ಆರೋಪ/ಅಪಾದನೆಗಳ ಪ್ರಕರಣಗಳು ಇತ್ಯರ್ಥಗೊಂಡಿರುವುದನ್ನು ಖಚಿತಪಡಿಸಿಕೊಳ್ಳದೆಯೇ ಮೂಲ ನೋಂದಣಿ ಅಧಿಕಾರಿಗಳು ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂಬುದರ ಬಗ್ಗೆ ಪ್ರಮಾಣಪತ್ರಗಳನ್ನು ನೀಡಿದ್ದರು.

ವಿವಿಧ ಕ್ಷೇತ್ರ ಕಚೇರಿಗಳು ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರದ ನಡುವೆ ಸಮನ್ವಯತೆಯ ಕೊರತೆಯಿದ್ದಿತು ಎಂಬುದನ್ನು ಮೇಲಿನ ಲೋಪದೋಷಗಳು ಸೂಚಿಸುತ್ತವೆ.

ಈ ಪ್ರಕರಣಗಳನ್ನು ಅಕ್ಟೋಬರ್ 2016ರಲ್ಲಿ ಇಲಾಖೆ/ಸರ್ಕಾರದ ಗಮನಕ್ಕೆ ತರಲಾಯಿತು. ಉತ್ತರವನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

---

[14] ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರವು ಅಖಿಲ ಭಾರತ ಮಟ್ಟದಲ್ಲಿ ಪ್ರವಾಸಗಳನ್ನು ಕಾರ್ಯಾಚರಣೆ ಮಾಡುವ ವಾಹನಗಳು, ಗುತ್ತಿಗೆ ಆಧಾರದ ಮೇಲಿನ ಮೋಟಾರು ವಾಹನಗಳು, ಹಂತದಿಂದ ಹಂತಕ್ಕೆ ಸಾಗಣೆ ಮಾಡುವ ಮೋಟಾರು ವಾಹನಗಳು (ಅಂತರ ರಾಜ್ಯ), ಇವುಗಳಿಗೆ ಪರವಾನಿಗೆಯನ್ನು ನೀಡುವ ಪ್ರಾಧಿಕಾರವಾಗಿರುತ್ತದೆ. ಆ ರೀತಿ ನೀಡಲಾದ ಪರವಾನಿಗೆಯು ಐದು ವರ್ಷಗಳವರೆಗೆ ಊರ್ಜಿತಗೊಂಡಿರುತ್ತದೆ.

[15] ಬೆಂಗಳೂರು (ದಕ್ಷಿಣ), ನೆಲಮಂಗಳ ಹಾಗೂ ಝಳಕಿ ತನಿಖಾಠಾಣೆ.

### 4.4.9 ವಶಪಡಿಸಿಕೊಳ್ಳಲಾಗಿರುವ ಮತ್ತು ತಡೆಹಿಡಿದಿಟ್ಟುಕೊಳ್ಳಲಾಗಿರುವ ಮೋಟಾರು ವಾಹನಗಳ ವಿಲೇವಾರಿ

ವಶಪಡಿಸಿಕೊಳ್ಳಲಾಗಿರುವ ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿರುವ ವಾಹನಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ತೆರಿಗೆಯನ್ನು ಆ ರೀತಿ ವಶಪಡಿಸಿಕೊಳ್ಳಲಾದ ಅಥವಾ ತಡೆಹಿಡಿದಿಟ್ಟುಕೊಳ್ಳಲಾದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಪಾವತಿಸದಿದ್ದಲ್ಲಿ, ರಾಜ್ಯ ಸರ್ಕಾರದಿಂದ ಅಧಿಕಾರಯುಕ್ತ ಅಧಿಕಾರಿಯವರು ನೋಂದಾಯಿತ ಮಾಲೀಕರಿಗೆ ಹಾಗೂ ವಾಹನವನ್ನು ಹೊಂದಿದ್ದ ಅಥವಾ ವಾಹನದ ನಿಯಂತ್ರಣವನ್ನು ಹೊಂದಿದ್ದ ವ್ಯಕ್ತಿಗೆ ಆ ರೀತಿಯ ವಶಪಡಿಸಿಕೊಳ್ಳುವಿಕೆ ಹಾಗೂ ತಡೆಹಿಡಿದಿಟ್ಟುಕೊಳ್ಳುವಿಕೆಗೆ ತತ್‌ಕ್ಷಣದ ಮುಂಚಿತವಾಗಿ ಒಂದು ನೋಟೀಸನ್ನು ನೀಡಿದನಂತರ ಹಾಗೂ ಅದಕ್ಕೆ ಪ್ರತಿಕ್ರಿಯೆಯಂತೆ ಅವರು ಮಾಡಿರುವ ಆಕ್ಷೇಪಣೆಯು ಯಾವುದಾದರೂ ಇದ್ದಲ್ಲಿ, ಅದನ್ನು ಪರಿಗಣಿಸಿದನಂತರ ಅಂತಹ ವಾಹನವನ್ನು ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳ ನಿಯಮ 27–ಬಿ[16] ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಮಾರಾಟ ಮಾಡುವುದರ ಮೂಲಕ ಬಾಕಿಯಿರುವ ತೆರಿಗೆಯನ್ನು ವಸೂಲಾತಿ ಮಾಡತಕ್ಕದ್ದು ಎಂಬುದಾಗಿ ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮ, 1957ರ ಪರಿಚ್ಛೇದ 11–ಎ ಅಡಿಯಲ್ಲಿನ ಉಪ–ಪರಿಚ್ಛೇದ (2) ನಿರ್ದಿಷ್ಟಪಡಿಸಿದೆ.

ಆಯ್ಕೆ ಮಾಡಲಾದ ಕಚೇರಿಗಳಲ್ಲಿ ಲೆಕ್ಕಪರಿಶೋಧನೆಯ ಅವಧಿಯಲ್ಲಿ, 400 ಮೋಟಾರು ವಾಹನಗಳನ್ನು, ಬಾಕಿಯಿರುವಂತಹ ತೆರಿಗೆಯನ್ನು ಪಾವತಿಸದಿದ್ದ ಕಾರಣಕ್ಕಾಗಿ ವಶಪಡಿಸಿಕೊಳ್ಳಲಾಗಿದ್ದಿತು ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿದ್ದಿತು. ಅನುವುಗಳ ಅನುಸರಣೆಯನ್ನು ಹಾಗೂ ತೆರಿಗೆ ಬಾಕಿಗಳನ್ನು ವಸೂಲಾತಿ ಮಾಡುವಲ್ಲಿನ ಪರಿಣಾಮಕಾರಿತ್ವವನ್ನು ಹಾಗೂ ವಶಪಡಿಸಿಕೊಳ್ಳಲಾಗಿದ್ದ ಮೋಟಾರು ವಾಹನಗಳನ್ನು ಸಮಯೋಚಿತವಾಗಿ ವಿಲೇವಾರಿ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಲೆಕ್ಕಪರಿಶೋಧನೆಯು ಪರಿಶೀಲನೆಗಳನ್ನು ಮಾಡಿತು ಹಾಗೂ ಈ ಕೆಳಗಿನ ಅಂಶಗಳನ್ನು ಗಮನಿಸಿತು:

**4.4.9.1** ವಶಪಡಿಸಿಕೊಳ್ಳಲಾಗಿದ್ದ 400 ಮೋಟಾರು ವಾಹನಗಳ ಪೈಕಿ, 130 ಮೋಟಾರು ವಾಹನಗಳನ್ನು ಜುಲೈ 2006ರಿಂದ ಮೇ 2016ರ ಅವಧಿಗೆ 12[17] ಉಪ–ಸಾರಿಗೆ ಆಯುಕ್ತರುಗಳ ಕಚೇರಿಗಳು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಕಚೇರಿಗಳು/ಪ್ರಾದೇಶಿಕ ಸಾರಿಗೆ ಕಚೇರಿಗಳು/ತನಿಖಾ ಠಾಣೆಗಳಲ್ಲಿ ₹ 63.08 ಲಕ್ಷ ಮೊತ್ತದಷ್ಟು ತೆರಿಗೆಯನ್ನು ಪಾವತಿಸದಿದ್ದುದಕ್ಕಾಗಿ ವಶಪಡಿಸಿಕೊಳ್ಳಲಾಗಿದ್ದಿತು. ಆದಾಗ್ಯೂ, ಬಾಕಿಯಿದ್ದಂತಹ ತೆರಿಗೆಯನ್ನು ವಸೂಲಾತಿ ಮಾಡುವುದಕ್ಕಾಗಿ ಈ ಮೋಟಾರು ವಾಹನಗಳನ್ನು ಸಾರ್ವಜನಿಕ ಹರಾಜಿಗೆ ಇಟ್ಟಿರಲಿಲ್ಲ. ಈ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಹರಾಜುಗಳನ್ನು ನಡೆಸಲು ಕ್ರಮಗಳನ್ನು ಕೈಗೊಳ್ಳುವಲ್ಲಿ 3ರಿಂದ 97 ತಿಂಗಳುಗಳ ವಿಳಂಬವಾಗಿದೆ ಎಂಬುದಾಗಿ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ರಾಜಸ್ವ/ವರಮಾನವು ಬಾಕಿಯಿರುವಂತಹ ಈ ಎಲ್ಲಾ ಪ್ರಕರಣಗಳಲ್ಲಿ ಕ್ರಮಗಳನ್ನು ಕೈಗೊಳ್ಳದಿರಲು ಒದಗಿಸಲಾದಂತಹ ದಾಖಲೆಗಳಲ್ಲಿ ಕಾರಣಗಳು ಲಭ್ಯವಿರಲಿಲ್ಲ.

**4.4.9.2** ಐದು[18] ಉಪ–ಸಾರಿಗೆ ಆಯುಕ್ತರುಗಳು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ತೆರಿಗೆಗಳನ್ನು ಪಾವತಿಸದಿದ್ದುದಕ್ಕಾಗಿ 35 ಮೋಟಾರು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದ್ದಿತು ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿದ್ದಿತು. ವಾಹನ (VAHAN) ತಂತ್ರಾಂಶ ಅನ್ವಯದಲ್ಲಿ ಅಡ್ಡಪರಿಶೀಲನೆ ಮಾಡಲಾಗಿ, ಈ ಮೋಟಾರು ವಾಹನಗಳನ್ನು ಬಿಡುಗಡೆಗೊಳಿಸಲಾಗಿದ್ದಿತು ಹಾಗೂ ಇವುಗಳು ತದನಂತರ ತೆರಿಗೆಗಳನ್ನು ನಿಯತವಾಗಿ ಪಾವತಿಸುತ್ತಿದ್ದವು ಹಾಗೂ ದೈಹಿಕ ದೃಢತೆಯ ಪ್ರಮಾಣಪತ್ರಗಳನ್ನು ಕಾಲಾನುಕಾಲಕ್ಕೆ ನವೀಕರಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, ಒದಗಿಸಲಾದಂತಹ ದಾಖಲೆಗಳಿಂದ ಈ ಮೋಟಾರು ವಾಹನಗಳ ಬಿಡುಗಡೆ ಆದೇಶಗಳನ್ನು ಲೆಕ್ಕಪರಿಶೋಧನೆಯು ಪತ್ತೆಹಚ್ಚಲಾಗಲಿಲ್ಲ.

**4.4.9.3** ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1957ರ ನಿಯಮ 27–ಬಿ(8)ರ ಅನುಸಾರ, ಹರಾಜಿನ ಮೂಲಕ ಬರುವ ಪ್ರತಿಫಲದ ಮೊತ್ತವು ಬಾಕಿಯಿರುವ ತೆರಿಗೆ ಮೊತ್ತಕ್ಕಿಂತ ಹಾಗೂ ವಾಹನದ ಮಾರಾಟಕ್ಕೆ ಸಂಬಂಧಿತ ಆಕಸ್ಮಿಕ ವೆಚ್ಚಗಳಿಗಿಂತ ಕಡಿಮೆ ಇದ್ದಲ್ಲಿ, ಅಧಿಕಾರಯುಕ್ತ ಅಧಿಕಾರಿಯವರು

[16] ಮೋಟಾರು ವಾಹನದ ವಿವರಣೆ/ವರ್ಣನೆಯೂ ಒಳಗೊಂಡಂತೆ ಹರಾಜಿನ ದಿನಾಂಕ, ಸ್ಥಳ ಮತ್ತು ಸಮಯವನ್ನು ನಿರ್ದಿಷ್ಟಪಡಿಸಿದಂತೆ ಪ್ರಕಟಿಸುವಿಕೆಯನ್ನು (ಕನ್ನಡ ಮತ್ತು ಆಂಗ್ಲ ಭಾಷೆ ಎರಡರಲ್ಲಿಯೂ) ಒಳಗೊಂಡಂತೆ ಹರಾಜು ಹಾಕಬೇಕಾದ ರೀತಿಯನ್ನು ನಿಯಮ 27–ಬಿ ನಿರ್ದಿಷ್ಟಪಡಿಸುತ್ತದೆ. ಅದರ ಬಗ್ಗೆ ಸ್ಥಳೀಯ ವಾರ್ತಾಪತ್ರಿಕೆಗಳಲ್ಲಿ ಜಾಹೀರಾತು ನೀಡಬೇಕು. ನಿಯಮವು, ಮುಂದುವರೆದು, ಹರಾಜಿನ ಸಮಯದಲ್ಲಿ ಇಡಬೇಕಾದ ಠೇವಣಿಯ ಮೊತ್ತ, ಇತ್ಯಾದಿಗಳನ್ನು ನಿರ್ದಿಷ್ಟಪಡಿಸಿದೆ.

[17] ಬೆಂಗಳೂರು (ಕೇಂದ್ರ), ಬೆಂಗಳೂರು (ದಕ್ಷಿಣ), ಇಲೆಕ್ಟ್ರಾನಿಕ್ಸ್ ಸಿಟಿ, ಧಾರವಾಡ, ಹಾಸನ, ಕಲಬುರಗಿ, ಕೋಲಾರ, ಮಂಡ್ಯ, ನೆಲಮಂಗಲ, ಮಂಗಳೂರು, ಶಿವಮೊಗ್ಗ, ಹುಮನಾಬಾದ್ ತನಿಖಾಠಾಣೆ.

[18] ಇಲೆಕ್ಟ್ರಾನಿಕ್ಸ್ ಸಿಟಿ, ಕಲಬುರಗಿ, ಕೋಲಾರ, ನೆಲಮಂಗಲ ಮತ್ತು ಮಂಡ್ಯ.

ಅಂತಹ ಕೊರತೆಯ ಮೊತ್ತವನ್ನು ಭೂ ಕಂದಾಯ ಬಾಕಿಗಳ ರೀತಿಯಲ್ಲಿ ವಸೂಲಾತಿ ಮಾಡುವ ಸಲುವಾಗಿ ಪ್ರಮಾಣಪತ್ರವನ್ನು ವಾಹನದ ನೋಂದಣಿ ಅಧಿಕಾರಿಯವರು ಇರುವಂತಹ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಕಳುಹಿಸಿಕೊಡತಕ್ಕದ್ದು.

ಸರ್ಕಾರಕ್ಕೆ ಬರಬೇಕಾಗಿದ್ದ ₹ 11.26 ಲಕ್ಷ ಮೊತ್ತದಷ್ಟು ಬಾಕಿಗಳ ವಸೂಲಾತಿಗಾಗಿ ವಶಪಡಿಸಿಕೊಳ್ಳಲಾಗಿದ್ದಂತಹ 15 ಮೋಟಾರು ವಾಹನಗಳ ವಿಲೇವಾರಿಗಾಗಿ 04ರಿಂದ 151 ತಿಂಗಳುಗಳ ಒಂದು ಗಮನಾರ್ಹ ವಿಳಂಬದೊಂದಿಗೆ ಕ್ರಮಗಳನ್ನು ಕೈಗೊಳ್ಳಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹರಾಜಿನ ಮೂಲಕ ಈ ವಾಹನಗಳ ಪ್ರತಿಯಾಗಿ ವಸೂಲಾತಿ ಮಾಡಲಾದ ಮೊತ್ತವು **ಕೋಷ್ಟಕ 4.4**ರಲ್ಲಿ ನೀಡಲಾಗಿರುವಂತೆ ಆಗಿದ್ದಿತು.

**ಕೋಷ್ಟಕ :4.4**
**ಹರಾಜಿನಲ್ಲಿ ಮೋಟಾರು ವಾಹನಗಳ ವಿಲೇವಾರಿ**

**(₹ ಲಕ್ಷದಲ್ಲಿ)**

| ವಿಳಂಬ | ಮೋಟಾರು ವಾಹನಗಳ ಸಂಖ್ಯೆ | ಬಾಕಿ ಇರುವ ತೆರಿಗೆ ಮೊತ್ತ | ವಸೂಲಾತಿ ಮಾಡಲಾದ ಮೊತ್ತ |
|---|---|---|---|
| 04 ತಿಂಗಳುಗಳಿಂದ 12 ತಿಂಗಳುಗಳು | 04 | 3.56 | 1.97 |
| 13 ತಿಂಗಳುಗಳಿಂದ 60 ತಿಂಗಳುಗಳು | 06 | 6.36 | 3.49 |
| 61 ತಿಂಗಳುಗಳಿಂದ 120 ತಿಂಗಳುಗಳು | 03 | 0.64 | 0.33 |
| 121 ತಿಂಗಳುಗಳಿಗೂ ಮೀರಿದಂತೆ | 02 | 0.70 | 0.34 |
| **ಒಟ್ಟು** | **15** | **11.26** | **6.13** |

ಹರಾಜು ಪ್ರಕ್ರಿಯೆಯಿಂದ ಸಂಗ್ರಹಿಸಲಾದ ರಾಜಸ್ವ/ವರಮಾನವು ಬಾಕಿಯಿದ್ದಂತಹ ತೆರಿಗೆ ಮೊತ್ತಕ್ಕಿಂತ ಕಡಿಮೆಯಿದ್ದಿತಾದರೂ, ತೆರಿಗೆಯ ಕೊರತೆಯ ಮೊತ್ತವನ್ನು ವಸೂಲಾತಿ ಮಾಡುವ ಸಲುವಾಗಿ, ಇಲಾಖೆಯು ಪ್ರಮಾಣಪತ್ರವನ್ನು ಜಿಲ್ಲಾಧಿಕಾರಿಯವರಿಗೆ (ಕಂದಾಯ) ಕಳುಹಿಸಿಕೊಡಲು ಕ್ರಮವನ್ನು ಕೈಗೊಳ್ಳಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**4.4.9.4** ಇಲಾಖೆಯು ವಶಪಡಿಸಿಕೊಂಡಿದ್ದ ಹಾಗೂ ತಡೆಹಿಡಿದಿದ್ದ ಮೂರು ಮೋಟಾರು ವಾಹನಗಳ ವಿರುದ್ಧವಾಗಿ ವಾಹನಗಳನ್ನು ನೋಂದಣಿಯನ್ನು ಮಾಡಿಸದಿರುವ ಬಗ್ಗೆ ಆರೋಪ/ಅಪಾದನೆಯನ್ನು ದಾಖಲಿಸಿದ್ದಿತು. ಇಲಾಖೆಯ ದಾಖಲೆಗಳ ಅನುಸಾರ, ಈ ಮೋಟಾರು ವಾಹನಗಳ ಪೈಕಿ ಎರಡು ವಾಹನಗಳು, ವಶಕ್ಕೆ ತೆಗೆದುಕೊಳ್ಳಲಾಗಿದ್ದ ಸ್ಥಳದಿಂದ ಕಾಣೆಯಾಗಿದ್ದವು. ಈ ನಿಟ್ಟಿನಲ್ಲಿ ಪರೀಕ್ಷಣೆ ಮಾಡಲಾಗಿ, ಮೂರನೆಯ ಮೋಟಾರು ವಾಹನವೂ ಕೂಡ ವಶಕ್ಕೆ ತೆಗೆದುಕೊಳ್ಳಲಾಗಿದ್ದ ಕಚೇರಿಯ ಸ್ಥಳದಿಂದ ಕಾಣೆಯಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಈ ವಾಹನಗಳನ್ನು ಪತ್ತೆಹಚ್ಚುವುದಕ್ಕಾಗಿ ಇಲಾಖೆಯು ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಗೆ ಒದಗಿಸಲಾದಂತಹ ದಾಖಲೆಗಳಿಂದ ಗಮನಿಸಿತು.

**4.4.9.5** ಉಳಿದ 217[19] ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ, 14 ಮೋಟಾರು ವಾಹನಗಳನ್ನು, ಆ ವಾಹನಗಳಿಂದ ಬಾಕಿಯಿದ್ದಂತಹ ತೆರಿಗೆ ಮೊತ್ತಕ್ಕೆ ಅನುಗುಣವಾದ ಮೊತ್ತಕ್ಕೆ ಹರಾಜು ಮಾಡಲಾಗಿದ್ದಿತು. ಮುಂದುವರೆದು, 125 ವಾಹನಗಳಿಗೆ ಸಂಬಂಧಿಸಿದಂತೆ, ಈ ಮೋಟಾರು ವಾಹನಗಳಿಂದ ಯಾವುದೇ ತೆರಿಗೆ ಬಾಕಿಗಳೂ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ದಾಖಲೆಗಳಿಂದ ಗಮನಿಸಿತು. ಆದಾಗ್ಯೂ, ಈ ಮೋಟಾರು ವಾಹನಗಳ ಬಿಡುಗಡೆಗಾಗಿ ವಾಹನಗಳ ಮಾಲೀಕರುಗಳು ಯಾವುದೇ ಕೋರಿಕೆಯನ್ನೂ ಸಲ್ಲಿಸಿರಲಿಲ್ಲವದ್ದರಿಂದ, ಇಲಾಖೆಯು ಈ ಮೋಟಾರು ವಾಹನಗಳನ್ನು ಬಿಡುಗಡೆ ಮಾಡಿರಲಿಲ್ಲ. ಈ ನಿಟ್ಟಿನಲ್ಲಿ, ಇಲಾಖೆಯು ವಾಹನಗಳ ಮಾಲೀಕರುಗಳಿಗೆ ನೀಡಿರುವ ಮಾಹಿತಿ ಪತ್ರಗಳು ತಪ್ಪಿನಿಂದ ಕೂಡಿದ ಅಥವಾ ಅಪೂರ್ಣ ವಿಳಾಸದ ಕಾರಣ ಹಿಂತಿರುಗಿ ಬಂದಿದ್ದವು. ಇಲಾಖೆಯು, ಈ ಮೋಟಾರು ವಾಹನಗಳ ವಿಲೇವಾರಿಗಾಗಿ, ಅಗತ್ಯ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಿದನಂತರ ಪೂರ್ವನಿಯಂತ್ರಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು.

ಈ ಅಪಾದನೆ/ಅಪರಾಧ ಪ್ರಕರಣಗಳ ಬಗ್ಗೆ ಅವ್ಯವಸ್ಥಿತವಾದ ರೀತಿಯಲ್ಲಿ ವ್ಯವಹರಿಸಲಾಗಿದ್ದಿತು ಕಚೇರಿಯ ವಶದಲ್ಲಿದ್ದ ಮೋಟಾರು ವಾಹನಗಳನ್ನು ವಿಲೇವಾರಿ ಮಾಡುವಲ್ಲಿ ಸಮರ್ಪಕ ನಿಯತಕಾಲಿಕ ಅನುಸರಣಾ ಕ್ರಮಗಳು ಹಾಗೂ ಸಮಯೋಚಿತ ಕ್ರಮಗಳ ಕೊರತೆಯಿದ್ದಿತು ಎಂಬುದನ್ನು ಈ ಎಲ್ಲಾ ಪ್ರಕರಣಗಳೂ ಸೂಚಿಸುತ್ತವೆ.

[19] ಹರಾಜಿನಲ್ಲಿ ವಿಲೇವಾರಿ ಮಾಡಲಾಗಿದ್ದ ಮೋಟಾರು ವಾಹನಗಳ 78 ಕಡತಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ, ಅದರ ಬಗ್ಗೆ ತದನಂತರ ಒಂದು ಕಂಡಿಕೆಯಲ್ಲಿ ವಿವರಿಸಲಾಗಿದೆ.

ಈ ಎಲ್ಲಾ ಪ್ರಕರಣಗಳನ್ನು ಸಂಬಂಧಿತ ಕಚೇರಿಗಳ ಗಮನಕ್ಕೆ ಲೆಕ್ಕಪರಿಶೋಧನಯು ಜೂನ್ 2016ರಿಂದ ಸೆಪ್ಟೆಂಬರ್ 2016ರಲ್ಲಿ ತಂದ ನಂತರ ಅಧಿಕಾರಿಗಳು ವಿಷಯವನ್ನು ಪರಿಶೀಲಿಸಲಾಗುವುದು ಎಂಬುದಾಗಿ ಉತ್ತರಿಸಲಾಗಿದ್ದಿತು.

ಈ ಪ್ರಕರಣಗಳನ್ನು ಅಕ್ಟೋಬರ್ 2016ರಲ್ಲಿ ಇಲಾಖೆಯ/ಸರ್ಕಾರದ ಗಮನಕ್ಕೆ ತರಲಾಯಿತು. ಉತ್ತರವನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 4.4.10 ದಾಖಲೆಗಳನ್ನು ಒದಗಿಸದಿದ್ದುದು

**4.4.10.1** ಧಾರವಾಡದ ಉಪ–ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ 2011–12ರಿಂದ 2015–16ರ ಅವಧಿಯಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲಾದಂತಹ ಮೋಟಾರು ವಾಹನಗಳಿಗೆ ಸಂಬಂಧಿತ 78 ಕಡತಗಳನ್ನು ಅನೇಕ ಬಾರಿ ಕೋರಿಕೆಯನ್ನು ಮಾಡಲಾದ ಹೊರತಾಗಿಯೂ ಒದಗಿಸಲಿಲ್ಲ.

**4.4.10.2** ಮಂಗಳೂರಿನ ಉಪ–ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ, ಮೇ 2000ದಿಂದ ಡಿಸೆಂಬರ್ 2015ರ ಅವಧಿಯ ತೆರಿಗೆ ಬಾಕಿಗಳಿಗಾಗಿ ವಶಪಡಿಸಿಕೊಳ್ಳಲಾಗಿರುವ ಹಾಗೂ ತಡೆಹಿಡಿದಿಟ್ಟುಕೊಳ್ಳಲಾಗಿರುವ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಐದು ಕಡತಗಳನ್ನು ಒದಗಿಸಲಿಲ್ಲ.

## 4.4.11 ನಿರ್ಣಯ

ಆಯ್ಕೆ ಮಾಡಲಾದ ಮಾದರಿಗಳಿಂದ ಗಮನಿಸಲಾದಂತೆ, ಪರಿಣಾಮಕಾರಿಯಾಗದಿರುವ ಅನುಸರಣಾ ಕ್ರಮಗಳ ಕಾರಣ, ಇಲಾಖಾ ಶಾಸನಬದ್ಧ ಕ್ರಮಗಳ ಅಡಿಯಲ್ಲಿನ ಪ್ರಕರಣಗಳು ಇತ್ಯರ್ಥಗೊಳ್ಳದೇ ಉಳಿದಿದ್ದವು ಎಂಬುದಾಗಿ ಲೆಕ್ಕಪರಿಶೋಧನೆಯು ತೀರ್ಮಾನಿಸುತ್ತಿದೆ. ಇಲಾಖೆಯಲ್ಲಿ ಒಂದು ಕೇಂದ್ರೀಕೃತ ದತ್ತಸಂಚಯ ಹಾಗೂ ನಿಯಂತ್ರಣಗಳ ಅನುಪಸ್ಥಿತಿಯು, ಪ್ರಕರಣಗಳು ಬಾಕಿಯಿರುವಂತಹ ಮೋಟಾರು ವಾಹನಗಳೂ ಸಹ, ಅವುಗಳನ್ನು ಇತ್ಯರ್ಥಗೊಳಿಸದೆಯೇ ದೈಹಿಕ ಸ್ಥಿರತೆ ಪ್ರಮಾಣಪತ್ರಗಳ ನವೀಕರಣ, ಪರವಾನಿಗೆಗಳ ನೀಡಿಕೆ/ನವೀಕರಣ/ತೆರಿಗೆ ಪಾವತಿ/ಅನುಮತಿ ಪ್ರಮಾಣಪತ್ರಗಳು/ಯಾವುದೇ ಆಕ್ಷೇಪಣೆಗಳು ಇಲ್ಲದ ಪ್ರಮಾಣಪತ್ರಗಳನ್ನು ಪಡೆದುಕೊಳ್ಳುವಲ್ಲಿ ಪರಿಣಮಿಸಿದ್ದಿತು. ಮತ್ತೋರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಮೂಲ ದಾಖಲೆಗಳನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಮೂಲ ನೋಂದಣಿ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡುವಲ್ಲಿ ಸಮಯೋಚಿತ ಕ್ರಮವನ್ನು ತೆಗೆದುಕೊಂಡಿರಲಿಲ್ಲ, ಇದರಿಂದಾಗಿ ನೋಂದಣಿ ಪ್ರಮಾಣಪತ್ರ, ಮೋಟಾರು ಚಾಲನಾ ಪರವಾನಿಗೆಯ ನಕಲು ಪ್ರತಿಗಳನ್ನು ಸುಳ್ಳು ಪ್ರಮಾಣಪತ್ರಗಳ ಆಧಾರದ ಮೇರೆಗೆ ನೀಡುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು. ಮೋಟಾರು ವಾಹನಗಳು ಸಾಗಣೆ ಮಾಡಿದ್ದ ಮಿತಿಮೀರಿದ ಸರಕುಗಳನ್ನು ವಾಹನಗಳಿಂದ ಇಳಿಸದಿರುವುದು ರಸ್ತೆಯ ಸ್ಥಿತಿಗತಿಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ ಹಾಗೂ ಈಗಾಗಲೇ ಕಲುಷಿತಗೊಂಡಿರುವ ಪರಿಸರವನ್ನು ಇನ್ನೂ ಹಾಳುಗೆಡವುತ್ತದೆ. ಮುಂದುವರೆದು, ವಶಪಡಿಸಿಕೊಳ್ಳಲಾಗಿರುವ ಮೋಟಾರು ವಾಹನಗಳನ್ನು ವಿಲೇವಾರಿ ಮಾಡದಿರುವುದು ಅಥವಾ ವಿಳಂಬವಾಗಿ ಮಾಡಿರುವುದು ವಿಲೇವಾರಿ ಮಾಡದ ವಾಹನಗಳ ಗಮನಾರ್ಹವಾದ ಸಂಖ್ಯೆಯು ವಿಲೇವಾರಿಗೊಳ್ಳದೇ ಉಳಿದಿರುವಲ್ಲಿಗೆ ಹಾಗೂ ಅಲ್ಲದೆಯೇ ಸರ್ಕಾರದ ರಾಜಸ್ವ/ವರಮಾನಕ್ಕೆ ನಷ್ಟ ಸಂಭವಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

## 4.4.12 *ಶಿಫಾರಸ್ಸುಗಳು*

ಈ ಕೆಳಗಿನ ಅಂಶಗಳನ್ನು ಶಿಫಾರಸು ಮಾಡಲಾಗುತ್ತಿದೆ:

***1. ಮೋಟಾರು ವಾಹನಗಳು ಎಸಗಿರುವ ಅಪರಾಧದ ಮಾಹಿತಿಯನ್ನು ರಾಜ್ಯದೆಲ್ಲೆಡೆ ಗಮನಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಪರಾಧ ಪ್ರಕರಣಗಳಿಗಾಗಿ ಕೇಂದ್ರೀಕೃತ ದತ್ತಸಂಚಯವನ್ನು ಅಭಿವೃದ್ಧಿಪಡಿಸಬೇಕು ಹಾಗೂ ದೈಹಿಕ ದೃಢತೆ ಪ್ರಮಾಣಪತ್ರದ ನವೀಕರಣ/ಅನುಮತಿ ಪ್ರಮಾಣಪತ್ರ (ಸಿಸಿ), ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂಬುದರ ಬಗ್ಗೆ ಪ್ರಮಾಣಪತ್ರ/ಪರವಾನಿಗೆಗಳು ಅಥವಾ ಅವುಗಳ ನವೀಕರಣ/ನಕಲಿ ದಾಖಲೆಗಳ ನೀಡಿಕೆ, ಇತ್ಯಾದಿಗಳಿಗೆ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದನ್ನು ನಿರ್ಣಾಯಕವಾಗಿರುವಂತೆ ಮಾಡಬೇಕು.***

***2. ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಸೂಕ್ತವಾಗಿರುವ ಎಲ್ಲಾ ವಿವರಗಳನ್ನು ಹಾಗೂ ಮೋಟಾರು ವಾಹನಗಳ ವಿರುದ್ಧವಾಗಿ ಈ ಹಿಂದೆ ದಾಖಲಾಗಿರುವ ಅಪರಾಧ ಘಟನೆಗಳನ್ನು ಪರಿಶೀಲಿಸುವ ಸಲುವಾಗಿ, ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿರುವ ರೀತಿಯಲ್ಲಿ ಕೈಯಿಂದ ಹಿಡಿಯುವ ಸಾಧನಗಳನ್ನು ಜಾರಿ/ಮೋಟಾರು ವಾಹನಗಳ ಇನ್ಸ್‌ಪೆಕ್ಟರುಗಳಿಗೆ/ಅಧಿಕಾರಿಗಳಿಗೆ ಒದಗಿಸಬೇಕು.***